೧೯೮೭ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೆ, ೧೯೮೭ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ನಾನು ಸೂಚಿಸುತ್ತೇನೆ.

ಪ್ರಸ್ತಾವನೆಯನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಆಯವ್ಯಯ ಭಾಷಣದಲ್ಲಿ ತಿಳಿಸಿರುವ ಪ್ರಕಾರ ಈ ಮಾರಾಟ ತೆರಿಗೆಯ ತಿದ್ದುಪಡಿ ವಿಧೇಯಕವನ್ನು ತರಲಾಗಿದೆ. ಇದರಿಂದ ಸುಮಾರು ೧೦೫ ಕೋಟಿ ರೂಪಾಯಿಗಳ ವರಮಾನ ಬರತಕ್ಕಂಥ ನಿರೀಕ್ಷಣೆ ಇದೆ. ಇದರ ಬಗ್ಗೆ ಈಗಾಗಲೇ ಸಾಮಾನ್ಯ ಚರ್ಚೆಯಲ್ಲಿ ಭಾಗವಹಿಸಿದಂಥ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಸೂಚಿಸಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆ ಚರ್ಚೆಗೆ ಬೆಲೆ ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್ —ಹೇಳುವಂಥ ಅವಕಾಶವಿತ್ತು ಹೇಳಿದ್ದಾರೆ. ನಾನು ಹೇಳತಕ್ಕಂಥ ತಾತ್ಪರ್ಯವೇನೆಂದರೆ ಮಾನ್ಯ ಸದಸ್ಯರು ಈ ತಿದ್ದುಪಡಿ ಮಸೂದೆ ಬಗ್ಗೆ ಹೇಳಬೇಕಾದಂಥ ತಮ್ಮ ಅಭಿಪ್ರಾಯಗಳನ್ನು ಈಗಾಗಲೇ ತಮಗೆ ಇದ್ದಂಥ ಅವಕಾಶವನ್ನು ಉಪಯೋಗಿಸಿಕೊಂಡು ಸೂಚನೆ ಮಾಡಿದ್ದಾರೆ. ಅದಕ್ಕನುಸಾರವಾಗಿ, ಸಮಯಕ್ಕೆ ಸರಿಯಾದಂಥ ಉತ್ತರವನ್ನು ಕೊಟ್ಟಿದ್ದಾರೆ. ಸರ್ಕಾರ ಹಣಕಾಸನ್ನು ಹೆಚ್ಚಿಸತಕ್ಕಂಥ ದೃಷ್ಟಿಯಿಂದ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮುಖ್ಯ ಮಂತ್ರಿಗಳು ಟೂತ್‌ಪೇಸ್ಟ್ ಎಲ್.ಪಿ.ಜಿ. ಗ್ಯಾಸ್ ಮುಂತಾದ್ದರ ಬಗ್ಗೆ ಕನ್ಸೆಷನ್ ಕೊಡುವುದರ ಬಗ್ಗೆ ಕನ್ಸಿಡರ್ ಮಾಡುತ್ತೇನೆ, ಅದನ್ನು ಕೊನೆಗೆ ಅನೌನ್ಸ್ ಮಾಡುತ್ತೇನೆ ಎಂದು ಹೇಳಿದರು. ಆದರೆ ಇವತ್ತಿನ ದಿವಸ ಅದೇನೂ ಇಲ್ಲ. ಬರೀ ಚರ್ಚೆಯಾಯಿತು, ತಾವು ಇದನ್ನು ಪಾಸ್ ಮಾಡಿಕೊಡಿ ಎಂದು ಹೇಳುತ್ತಾ ಇದ್ದೀರಿ. ಕಾಫಿ, ಟೀ ಮೇಲೆ ರಿಯಾಯಿತಿಯನ್ನು ಕನ್ಸಿಡರ್ ಮಾಡುತ್ತೇನೆ, ಕೆಲವು ಕನ್ಸೆಷನ್ ಕೊಡುತ್ತೇನೆ, ಕೆಲವು ರೆಪ್ರೆಸೆಂಟೇಷನ್ಸ್ ನನ್ನ ಹತ್ತಿರ ಬರುತ್ತಿವೆ, ಅದೆನ್ನೆಲ್ಲಾ ಪರಿಶೀಲಿಸಿ ಯಾವುಯಾವುದಕ್ಕೆ ಕನ್ಸೆಷನ್ ಕೊಡಬೇಕು ಎನ್ನುವುದನ್ನು ಕೊನೆಯ ದಿವಸ ಅನೌನ್ಸ್ ಮಾಡುತ್ತೇನೆ ಎಂದು ಹೇಳಿದರು. ಇಲ್ಲಿ ಚರ್ಚೆ ಆಯಿತು, ಮಧ್ಯದಲ್ಲಿ ಅನೇಕ ಮಾನ್ಯ ಸದಸ್ಯರು ಕೇಳಿದಾಗ ಮಾನ್ಯ ಮುಖ್ಯಮಂತ್ರಿಗಳು ಈ ರೀತಿ ಹೇಳಿದರು. ಇವತ್ತಿನ ದಿವಸ ತಾವು ಬಿಲ್ಲನ್ನು ತಂದು ನೇರವಾಗಿ ಪಾಸ್ ಮಾಡಿಕೊಡಿ ಎಂದು ಹೇಳಿ ಕಲೆಕ್ಷನ್‌ಗೆ ಹೋಗುತ್ತೇವೆ ಎಂದರು ಹೊರಟರಿ.

ಶ್ರೀ ಎ. ಲಕ್ಷ್ಮೀಸಾಗರ್.—ಆದುದರಿಂದ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಈಗಾಗಲೇ ಸೂಚನೆ ಮಾಡಿದ್ದಾರೆ. ಸರ್ಕಾರ ಹೆಚ್ಚು ಖರ್ಚು ಮಾಡಬೇಕಾದಂಥ ಪರಿಸ್ಥಿತಿ ಇದೆ. ಕೊರತೆಯನ್ನು ಕಡಿಮೆ ಮಾಡಬೇಕಾದಂಥ ಅವಶ್ಯಕತೆ ಇದೆ ಎನ್ನುವುದನ್ನೂ ಕೂಡ ಮಾನ್ಯ ಸದಸ್ಯರು ಮನಗಂಡಿದ್ದಾರೆ. ಆದುದರಿಂದ ಈ ತಿದ್ದುಪಡಿ ವಿಧೇಯಕಕ್ಕೆ ತಮ್ಮ ಅನುಮೋದನೆಯನ್ನು ಕೊಡಬೇಕು ಎಂದು ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ಮೊನ್ನೆ ಲೋಕಸಭೆಯಲ್ಲಿ ರಿಪೋರ್ಟ್ ನಡೆದದ್ದು ಪತ್ರಿಕೆಯಲ್ಲಿ ಬಂತು. ಅದನ್ನು ನೋಡುವಾಗ ಗೊತ್ತಾಗುತ್ತದೆ. ಇಡೀ ರಾಷ್ಟ್ರದಲ್ಲಿ ಕರ್ನಾಟಕ ರಾಜ್ಯದಲ್ಲಿ ಈ ವರ್ಷ ಹಾಕಿದಷ್ಟು ತೆರಿಗೆ ಯಾವ ರಾಜ್ಯವೂ ಕೂಡ ಹಾಕಲಿಲ್ಲ. ಇದಕ್ಕಿಂತ ದೊಡ್ಡ ರಾಜ್ಯಗಳೂ ಕೂಡ ಹಾಕಲಿಲ್ಲ ಎಂದು ನಾನು ನೆನೆಸಿದ್ದೆ. ಇದನ್ನು ತಿಳಿದುಕೊಂಡು ಇವರಿಗೆ ಸ್ವಲ್ಪ ತಿಳುವಳಿಕೆ ಬರುತ್ತದೆ ಎಂದು. ಕೆಲವರಿಗೆ ತಿಳಿವಳಿಕೆ ಎಂತೊಬ್ಬರು ಹೇಳಿದಾಗ ಬರುತ್ತದೆ. ಕೆಲವರಿಗೆ ತನ್ನಷ್ಟಕ್ಕೆ ತಾನೇ ಬರುತ್ತದೆ ಇವರು ಎರಡನೇ ಕ್ಯಾಟಗರಿಯಲ್ಲಿರಂತಾ ರೆಂದು ನಾನು ತಿಳಿದಿದ್ದೆ. ಇವರಿಗೆ ಅಂತಹ ತಿಳಿವಳಿಕೆ ಬರಲಿಲ್ಲ, ಮತ್ತೊಬ್ಬರು ಹೇಳಿದರೂ ತಿಳಿವಳಿಕೆ ಬರುವುದಿಲ್ಲ. ತನ್ನಷ್ಟಕ್ಕೆ ತಾನೇ ಬರುವುದಿಲ್ಲ. ಎರಡನೇ ಕ್ಯಾಟಗರಿಯಲ್ಲಿ ತನ್ನಷ್ಟಕ್ಕೆ ತಾನೇ

ತಿಳಿವಳಿಕೆ ಬರತಕ್ಕಂಥ ಸರ್ಕಾರ ಆಲ್ಲ ಎಂದು ಇವರ ವರ್ತನೆಯಿಂದ ತೋರಿಸಿಕೊಟ್ಟಿದ್ದಾರೆ. ಮಾನ್ಯ ಖರ್ಗೆಯವರು ಹೇಳಿದ ಪ್ರಕಾರ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈ ಸದನದಲ್ಲಿ ಆಶ್ವಾಸನೆ ಕೊಟ್ಟಿದ್ದಾರೆ. ಆಫ್‌ಕೋರ್ಸ್ ಆ ಆಶ್ವಾಸನೆ ಅಷ್ಯೂರೆನ್ಸ್ ಕಮಿಟಿಗೆ ಹೋಗಬಹುದು. ತೆರಿಗೆಯ ಪ್ರಪೋಸಲ್ ಕೂಡ ಅಶ್ಯೂರೆನ್ಸ್ ಕಮಿಟಿಗೆ ಹೋಗಬೇಕಾದ ಗತಿ ಬಂದರೆ ಇಲ್ಲಿ ಚರ್ಚೆಗೆ ಏನು ಬೆಲೆ ಸಿಕ್ಕಿದ ಹಾಗೆ ಆಯಿತು. ಮಾನ್ಯ ಮುಖ್ಯಮಂತ್ರಿಗಳು ಕೆಲವಕ್ಕೆ ಕನ್ಸೀಷನ್ ಕೊಡುತ್ತೇನೆ ಎಂದು ಹೇಳಿದರು

ಅಧ್ಯಕ್ಷರು.—ಟ್ಯಾಕ್ಸ್ ಹೆಚ್ಚು ಮಾಡಬಾರದು ಎಂದು ಹೇಳುತ್ತಿದ್ದೀರಿ. ಸರ್ಕಾರದ ಖರ್ಚು ವೆಚ್ಚವನ್ನು ಹೇಗೆ ಮೀಟ್ ಮಾಡಬೇಕು, ಅದನ್ನು ಹೇಳಿ. ಟ್ಯಾಕ್ಸ್ ಹಾಕುವುದು ಅನಿವಾರ್ಯ.

ಶ್ರೀ ಎಂ. ವೀರಪ್ಪ ಮೊಯಿಲಿ.—ಖರ್ಚು ವೆಚ್ಚವನ್ನು ಸರಿದೂಗಿಸಲಿಕ್ಕೆ ಸರ್ಕಾರ ಇರುವುದು. ಈ ರೀತಿ ಸಿಕ್ಕಾಪಟ್ಟೆ ಇಚ್ಛಾನುಸಾರ ತೆರಿಗೆ ಹಾಕಬಾರದು. ಎಲ್ಲಿ ಹಾಕಬೇಕೋ ಅಲ್ಲಿ ಹಾಕಬೇಕು. ಎಲ್ಲಿ ಹಾಕಬೇಕೋ ಅಲ್ಲಿ ಹಾಕದೇ ಸರಿದೂಗಿಸಲಿಕ್ಕೆ ಬರುವುದಿಲ್ಲ. ಈಗ ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾರೆ. ತಾವು ಕೆಲವು ಸೂಚನೆಯನ್ನು ಮಾಡಿದ್ದೀರಿ. ಈಗ ಟ್ಯಾಕ್ಸ್ ಬಿಲ್‌ಗಳು ಪಾಸಾಗುತ್ತಾ ಹೋಗಿದೆ. ತಪ್ಪಿ ಮಾತು ಸರ್ಕಾರದಲ್ಲಿ ನಡೆಯುವುದಿಲ್ಲವೋ ಅಥವಾ ಏನೋ ನಮಗೆ ಅರ್ಥವಾಗುತ್ತಾ ಇಲ್ಲ. ಇದರಲ್ಲಿ ಅರ್ಥಮೆಟಿಕಲ್ ಮಿಸ್ಟೇಕ್ ಕೂಡ ಇದೆ. ಕ್ಲಾಸ್ (೮)ರ ಪ್ರಕಾರ ನನಗೆ ಹಾಗೆ ಅನ್ನಿಸುತ್ತದೆ.

ಶ್ರೀ ಎಂ. ನಂಲ್ಲಿಕಾರ್ಜುನ ಖರ್ಗೆ.—ರಿಯಾಯಿತಿ ಕೊಡುವುದಕ್ಕಾಗಿಯೇ ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾರೆಂದು ಕಾಣುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ತಾವುಗಳು ಹಿಂದೆ ಏನು ಮಾತನಾಡಿದ್ದೀರಿ ಅದರ ಆಧಾರದ ಮೇಲೆ ರಿಯಾಯಿತಿ ಕೊಟ್ಟಿದ್ದೇನೆ. ಸೇಲ್ಸ್ ಟ್ಯಾಕ್ಸ್ ವಿಚಾರದಲ್ಲಿ turnover tax payable by dealers on the turnovers relating to second and subsequent sales of LPG cylinders would be reduced from the proposed rate of 1.25% to 0.75%. ಸಂಬಂಧಪಟ್ಟ ಸಂಸ್ಥೆಯ ಪ್ರತಿನಿಧಿಗಳು ನನ್ನನ್ನು ಭೇಟಿಯಾಗಿದ್ದರು ಅವರಿಗೂ ಕೂಡ ಈ ವಿಷಯವನ್ನು ತಿಳಿಸಿದ್ದೇನೆ. Turnover tax payable by dealers on retail sales of medicines and pharmaceutical preparations would be reduced from the proposed rate of 1.25% to 0.75%.

ಶ್ರೀ ಆರ್. ವೆಂಕಟರಾಮಯ್ಯ.—ನಮಗೆ ಆ ಕಾಪಿಯನ್ನು ಕಳುಹಿಸಿಕೊಡಿ.

ಶ್ರೀ ರಾಮಕೃಷ್ಣ ಹೆಗಡೆ.—ಕಳುಹಿಸಿಕೊಡುತ್ತೇನೆ. Tax payable under KST Act on computers manufactured in Karnatake would be reduced from 6% to 3%. ಇಂಥ ಯೂನಿಟ್‌ಗಳು ನಮ್ಮ ರಾಜ್ಯದಲ್ಲಿ ಮೂರು ಇವೆ. ಅವುಗಳಿಗೆ ಧಕ್ಕೆ ಯಾಗಬಾರದೆನ್ನುವ ದೃಷ್ಟಿಯಿಂದ ಇದನ್ನು ಮಾಡಿದ್ದೇವೆ. Tax payable under KST Act on tyres, tubes and flaps would be reduced from 10% to 7% at the point of the first sale and the tax payable at the rate of 3% at the point of last sale would be retained. Tax payable under KST Act by oil millers and purchasers of safflower and sun-flower seeds consumed in the manufacture of safflower and sun-flower oil would be exempt if such oil is sold within the State of Karnataka or in the course of inter-state trade and the tax is paidon such sales. ಮುಖ್ಯವಾಗಿ ಮಾನ್ಯ ಸದಸ್ಯರಾದ ಕಡಪಟ್ಟಿಯವರು ಶೇಂಗಾ ಬೀಜದ ಮೇಲೆ ರಿಯಾಯಿತಿ ಕೊಟ್ಟಿದ್ದೀರಿ ಅದೇ ರೀತಿಯ ರಿಯಾಯಿತಿಯನ್ನು ಎಣ್ಣೆ ಬೀಜಗಳ ಮೇಲೂ ಕೊಡತಕ್ಕಂಥಾದ್ದು ಯೋಗ್ಯ ಎಂದು ಹೇಳಿದ್ದರು. ಅದನ್ನು ಕೂಡ ನಾವು ಸ್ವೀಕಾರ ಮಾಡಿದ್ದೇವೆ. Tax payable under section 6 of the KST Act by village industries recognised by the Commissioner o commercial taxes on purchases of paddy consumed in the manufactur e

of beaten rice, parched rice and hand-pounded rice would be exempted. ಅನೇಕ ಮಾನ್ಯ ಸದಸ್ಯರುಗಳು ಬತ್ತ ಮತ್ತು ಅಕ್ಕಿಯ ಮೇಲೆ ಹೆಚ್ಚಿನ ಭಾರವನ್ನು ಹಾಕಿದ್ದೇವೆಂದು ಹೇಳಿದ್ದಾರೆ. ಆ ಭಾವನೆ ಸರಿಯಲ್ಲ. ನಮ್ಮ ರಾಜ್ಯದಲ್ಲಿ ಬತ್ತ ಮಾರಾಟ ಮಾಡಿ ಅಕ್ಕಿ ಮಾಡಿದರೆ, ಬತ್ತದ ಮೇಲೆ ಕೊಟ್ಟಂಥ ಸೇಲ್ಸ್ ಟ್ಯಾಕ್ಸ್‌ನ್ನು ಕಳೆದು ಕೊಡುತ್ತಾರೆ; ಭತ್ತದ ಮೇಲೆ ಸೇಲ್ಸ್‌ಟ್ಯಾಕ್ಸ್ ನಿಜವಾಗಲೂ ಹಾಕತಕ್ಕಂಥಾದ್ದು ನಮ್ಮ ರಾಜ್ಯದಿಂದ ಬೇರೆ ರಾಜ್ಯಕ್ಕೆ ರಫ್ತ್ ಆಗತಕ್ಕಂಥ ಭತ್ತದ ಬಗ್ಗೆ ಮಾತ್ರ ಇದನ್ನು ನಾನು ಸ್ಪಷ್ಟ ಮಾಡಲಿಕ್ಕೆ ಬಯಸುತ್ತೇನೆ. ಆದರೆ ಎಂಟ್ರಿ ಟ್ಯಾಕ್ ವಿಚಾರದಲ್ಲಿ ಒಂದು..... ..

ಶ್ರೀ ಎಂ. ಎಸ್. ಕೃಷ್ಣನ್.—ನಿಮ್ಮ ಬಿಲ್ಲಿನಲ್ಲಿ ಆ ತರಹ ನೀವು ಪ್ರಾವಿಸೋ ಏನು ಹೇಳಿದಿರಿ ಎನ್ನುವುದನ್ನು ಅದನ್ನು ಇನ್‌ಕ್ಲೂಡ್ ಮಾಡಬೇಕು. It is going to offect those people

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನು ಮಾಡುತ್ತೇವೆ. We will give Clarification ಆ ಮೇಲೆ ಇಲ್ಲಿಂದ ಭತ್ತ ಕೇರಳಕ್ಕೆ ಹೋಗಲಿ, ಬೇರೆ ಯಾವುದೇ ರಾಜ್ಯಕ್ಕೆ ಹೋಗಲಿ, ಆಗ ಮಾತ್ರ ಭತ್ತದ ಮೇಲೆ ಈ ಸೇಲ್ಸ್ ಟ್ಯಾಂಕ್ಸ್ ಬರುತ್ತದೆ. ಇಲ್ಲಿ ಭತ್ತವನ್ನು ಅಕ್ಕಿ ಮಾಡಿದ್ದರೆ ಅಕ್ಕಿಯ ಮೇಲೆ ಏನು ಈಗ ಎರಡು ಪರ್‌ಸೆಂಟ್ ಇದೆ ಅದರಲ್ಲಿ ಸೆಟ್ ಆಫ್ ಕೊಡುತ್ತೇವೆ. ಇನ್ನು ಎಂಟ್ರಿ ಟ್ಯಾಕ್ಸ್ ವಿಚಾರದಲ್ಲೂ ಕೂಡ ಮಾನ್ಯ ಸದಸ್ಯರ ನೇಕರಿಗೆ ಒಂದು ತಪ್ಪು ಕಲ್ಪನೆಯಾಗಿದೆ ನಮ್ಮ ಸದಸ್ಯರಿಗೆ ಅಷ್ಟೇ ಅಲ್ಲ. ಕರ್ನಾಟಕ ಛೇಂಬರ್ ಆಫ್ ಕಾಮರ್ಸ್ ಅಧ್ಯಕ್ಷರಿಗೂ ಇನ್ನಿತರ ಸದಸ್ಯರಿಗೂ ಆಗಿದೆ. ಅವರು ಏನು ತಿಳಿದುಕೊಂಡಿದ್ದಾರೆ ಅಂದರೆ ಎಂಟ್ರಿ ಟ್ಯಾಕ್ಸ್ ನಾವು ೫ ಪರ್ಸೆಂಟ್ ಏರಿಸುತ್ತಿದ್ದೇವೆ ಎಂದು ಅದು ಇಲ್ಲ.

SRI M. VEERAPPA MOILY.—Hon ChiefMinister is taking the power.

ಶ್ರೀ ರಾಮಕೃಷ್ಣ ಹೆಗಡೆ.—ಪವರ್ ತೆಗೆದುಕೊಳ್ಳುತ್ತಿದ್ದೇವೆ. ಅಕಸ್ಮಾತ್ ಇದನ್ನು ಹೆಚ್ಚು ಮಾಡತಕ್ಕಂಥ ಅಗತ್ಯ ಬಿದ್ದರೆ, ಪುನಃ ಪುನಃ ನಾವು ಈ ಒಂದು ಆರ್ಡಿನೆನ್ಸ್ ಪಂತ್ರೋದು ಮಾಡತಕ್ಕೆ ಅಗತ್ಯ ಇರಕೂಡದು ಎಂಬು ಈ ಅಧಿಕಾರವನ್ನು ತೆಗೆದುಕೊಂಡಿದ್ದೇವೆ. ಯಾವುದೇ ಒಂದು ಪಸ್ತು ಇರಲಿ. .....

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧಿಕಾರ ಬಂದ ಮೇಲೆ ಅದನ್ನು ಚಲಾಯಿಸದೇ ಬಿಡುತ್ತೀರಾ ನೀವು.

ಶ್ರೀ ರಾಮಕೃಷ್ಣ ಹೆಗಡೆ.—ಅಧಿಕಾರ ಬಂದಿದ್ದನ್ನು ಕಡಿಮೆ ಮಾಡುತ್ತೇವೆ ಇಲ್ಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸಿಕ್ಕಿದ ಅಧಿಕಾರ ಬಿಡುವುದಿಲ್ಲ ನೀವು ಇನ್ನು ನಾವು ಕೊಟ್ಟ ಮೇಲೆ ಬೀಡುತ್ತೀರಾ ನೀವು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಖಾರ್ಗೆಯವರೆ, ಸಿಕ್ಕಿದ ಅಧಿಕಾರ ಬಿಡುವುದಿಲ್ಲ ಎಂದು ನಮಗೆ ನೀವು ಹೇಳುತ್ತಿದ್ದೀರಾ.

ಶ್ರೀ ಎಂ. ಎಸ್. ಕೃಷ್ಣನ್.—ನೀವು ಅಧಿಕಾರ ತೆಗೆದುಕೊಂಡು ಜಾಸ್ತಿ ಮಾಡುತ್ತಾ ಹೋದರೆ ನಾವು ಏನು ಮಾಡಬೇಕು ?

ಶ್ರೀ ರಾಮಕೃಷ್ಣ ಹೆಗಡೆ.—ಎಲ್. ಪಿ. ಜಿ. ಫಾರ್ಮಾಸ್ಯುಟಿಕಲ್ಸ್, ಲೂಬ್ರಿಕೆಂಟ್ಸ್ ಮೇಲೆ ಇದ್ದಂಥ ಎರಡ ಇವರೆ ಪರ್ಸೆಂಟ್ ಎಂಟ್ರಿ ಟ್ಯಾಕ್ಸನ್ನು ನಾವು ಇವೊತ್ತು ಕೇವಲ ೦.೭೫ ಪರ್‌ಸೆಂಟಿಗೆ ಇಳಿಸಿದ್ದೇವೋ, ಇಲ್ಲವೋ ಇದಕ್ಕಿಂತಲೂ ದೊಡ್ಡ ಉದಾಹರಣೆ ಬೇಕೋ ? ಎಲ್ಲಿ ಉಚಿತ ಎಂದು ಕಾಣುತ್ತದೆ, ಎಲ್ಲಿ ಯೋಗ್ಯ ಎಂದು ಕಾಣುತ್ತದೆ ಅಲ್ಲಿ ಕಡಿಮೆ ಮಾಡುತ್ತೇವೆಯೇ ಹೊರತು ಹೆಚ್ಚು ಮಾಡಲಿಕ್ಕೆ ಹೋಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಈ ಗ್ಯಾಸ್ ವಿಷಯದಲ್ಲಿ ನೀವಾಗಿಯೇ ಕಡಿಮೆ ಮಾಡುತ್ತಾ ಇರಲಿಲ್ಲ. ಕಡಿಮೆ ಮಾಡಿದ್ದು ಕೂಡ ಏತಕ್ಕೆ ಇಟ್ ಈಸ್ ಎ ಪಾರ್ಟ್ ಆಫ್ ದಿ ಆಕ್ಟ್ ಪಾರ್ಟ್ ಆಫ್ ದಿ ಬಿಲ್, ತಾವು ಜಾಸ್ತಿ ಮಾಡಬೇಕೆಂದು ಯೋಚನೆ ಮಾಡಿದ್ದಿರಿ, ಈ ರೆಪ್ರಸೆಂಟೇಷನ್ಸ್ ಬಂದ

ಮೇಲೆ ರೀಕನ್‌ಸಿಡರ್ ಮಾಡಿದ್ದೀರಿ. ಈಗ ಬಡ್ಜೆಟ್ ಸೆಷನ್ ಇದ್ದುದರಿಂದ ಮಾಡಿದ್ದೀರಿ ಸಪೋಸ್ ಬಡ್ಜೆಟ್ ಸೇಷನ್ ಇಲ್ಲದ್ದಿದರೆ ತಾವಾಗಿಯೇ ರೆಡ್ಯೂಸ್ ಮಾಡುತ್ತಿದ್ದಿರಾ ?

ಶ್ರೀ ರಾಮಕೃಷ್ಣ ಹೆಗಡೆ.—ಆಗಲೂ ರೆಪ್ರಸೆಂಟೇಷನ್ ಬರುತ್ತಿತ್ತು. ಆಗ ಕನ್‌ವಿನ್ಸ್ ಮಾಡಿದ್ದರೆ, ಮಾಡುತ್ತಿದ್ದೆವು.

ಶ್ರೀ ಎಂ. ಎಸ್. ಕೃಷ್ಣನ್.—ನೆಕ್ಸ್ಟ್ ಬಡ್ಜೆಟ್ ಸೆಷನ್‌ಗೆ ಬರಬೇಕು ಅದು.....

SRI RAMAKRISHNA HEGDE.—This is only the enabling provision If the Government cannot be trusted with this much of power...

SRI M, VEERAPPA MOILY.—Nobody can trust Particularly I can understand the sea off.

SRI RAMAKRISHNA HEGDE.—This was made by none other than Mr. Moily.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಪ್ರಾವಿಷನ್ ತೆಗೆದುಕೊಂಡು You can use that instrument at any time. That is the power vested with this House. you are depriving this house from that Particulear, This means some sortof delegated power.

SRI RAMAKRISHNA HEGDE.—This means, the House delegates this power to the Government. this House enables the Governmens to levy taxes. This is not the first time the Legislature it empowering the Government to levy the tax upto a certain percent.

SRI M. VEERAPPA MOILY.—Not in a matter like Entry Tax.

SRI RAMAKRISHNA HEGDE.—There are many instances when the same legislature has authorised the Government.

SRI M. VEERAPPA MOILY.—It is there in the CST

SRI RAMAKRISHNA HEGDE.—Let me finish. ಮತ್ತೊಂದು ವಿಚಾರ ಎಂದರೆ, ಆನೇಕಮಾನ್ಯ ಸದಸ್ಯರು ಇಲ್ಲಿ ಫೀಚರ್ ಫಿಲ್ಮಿಂ ಬಗ್ಗೆ ಪ್ರಸ್ತಾಪ ಎತ್ತಿದ್ದಾರೆ ಈ ಫೀಚರ್ ಫಿಲ್ಮ್ ಮೇಲೆ

(Interruption)

ಅಧ್ಯಕ್ಷರು.—ಅವರು ಓದಿ ಹೇಳಬೇಕೋ, ಬೇಡವೋ ? ದಯವಿಟ್ಟು ತಾವು ಕೂಡಿ.

ಶ್ರೀ ರಾಮಕೃಷ್ಣ ಹೆಗಡೆ.—ಫೀಚರ್ ಫಿಲ್ಮ್ ಮೇಲೆ ನಾವು ಮೊದಲು ೫ ಪರ್ಸೆಂಟ್ ಸೇಲ್ಸ್ ಟ್ಯಾಕ್ಸ್‌ನ್ನು ಹಾಕಬೇಕೆಂದು ಮಾಡಿದ್ದುದನ್ನು ಈಗ ೪ ಪರ್ಸೆಂಟ್‌ಗೆ ಇಳಿಸುತ್ತೇವೆಂದು, ನಾವು ಹೇಳಿದ್ದೆವು. ಫಿಲ್ಮ್ ಛೇಂಬರ್ ಆಫ್ ಕಾಮರ್ಸ್‌ನವರೂ ಮತ್ತು ಇನ್ನೂ ಅನೇಕ ಮಾನ್ಯ ಸದಸ್ಯರು ಇದನ್ನು ಪುನರ್ ವಿಮರ್ಶೆ ಮಾಡಬೇಕೆಂದು ಹೇಳಿದ್ದಾರೆ ನಿನ್ನೆಯ ದಿವಸ ಫಿಲ್ಮ್ ಛೇಂಬರ್‌ನವರೂ ಕೂಡ ಬಂದಿದ್ದರು. ಈ ನೀತಿಯಿಂದ ಯಾರು ಡಿಸ್ಟ್ರಿಬ್ಯೂಟರ್ಸ್ ಇರುತ್ತಾರೆ, ಯಾರು ಎಕ್ಸಿಬಿಟರ್ಸ್ ಇರುತ್ತಾರೆ, ಯಾರು ಫಿಲ್ಮ್ ಪ್ರೊಡ್ಯೂಸ್ ಮಾಡುತ್ತಾರೆ ಅಂಥವರಿಗೆ ೧೮೮ ತೊಂದರೆ ಆಗುತ್ತದೆ. ಇದರಿಂದ ನಿಮಗೆ ಎಷ್ಟು ಹಣ ಬರುತ್ತದೆ ಅಷ್ಟೇ ಹಣ ಬೇರೆ ಮಾರ್ಗದಿಂದ ಬರತಕ್ಕ ಉಪಾಯವನ್ನು ನಿಮಗೆ ಹೇಳಿಕೊಡುತ್ತೇವೆ. ಆದ್ದರಿಂದ ಈ ನೀತಿಯನ್ನು ಕೈ ಬಿಟ್ಟು ನಾವು ಹೇಳತಕ್ಕ ನೀತಿಯನ್ನು ಅನುಸರಿಸಿ ಎಂದು ಅವರು ಸೂಚನೆ ಮಾಡಿದ್ದರಿಂದ ನಾನು ಅದನ್ನು ಒಪ್ಪಿಕೊಂಡಿದ್ದೇನೆ. ಈ ದಿಸೆಯಲ್ಲಿ ಎಷ್ಟು ಹಣ ಬರಬೇಕಾಗಿತ್ತು, ಎಷ್ಟು ಕಡಿಮೆಯಾಗುತ್ತದೆ ಎಂಬುದನ್ನು ಲೆಕ್ಕಾಚಾರ ಹಾಕಿ ನೋಡ ಬೇಕಾಗಿದೆ. ಈಗ ಏನು ಸೇಲ್ ಟ್ಯಾಕ್ಸ್ ಇದೆ ಅದು ಬೇರೆ ಬೇರೆ ಜಾಗಗಳಲ್ಲಿ ಬೇರೆ ಬೇರೆ ರೇಟ್ಸ್

ಇದೆ. ಟ್ಯಾಕ್ಸ್‌ನ ರೇಟು ಟಿಕೆಟ್‌ನ ರೇಟಿನ ಮೇಲೆ ಅವಲಂಬಿಸಿದೆ. ಈಗ ಏನು ಷೋ ಟ್ಯಾಕ್ಸ್ ಹಾಕುತ್ತೇವೆಂದರೆ ೧ ಷೋಗೆ ೨೦ ರೂ ನಿಂದ ೧೦೦ ರೂಪಾಯಿಗಳವರೆಗೂ ಇದೆ. ಈಗ ಇದನ್ನು ನಾವು ಇಮ್ಮಡಿ ಮಾಡಬೇಕೆಂದಿದ್ದೇವೆ. ಷೋ ಟ್ಯಾಕ್ಸ್‌ನ ಬಗ್ಗೆ ಅವರೇ ಸೂಚನೆಯನ್ನು ಕೊಟ್ಟಿರುವುದರಿಂದ .....

SRI M. VEERAPPA MOILY.—It is only the shifting of burden.

ಶ್ರೀ ರಾಮಕೃಷ್ಣ ಹೆಗಡೆ.—ಷೋ ಟ್ಯಾಕ್ಸ್ ಕನ್‌ಸ್ಯೂಮರ್ ಮೇಲೆ ಹಾಕುವುದಿಲ್ಲ. ಸಿನಿಮಾ ಮಂದಿರದ ಮಾಲೀಕರಮೇಲೆ ಹಾಕುತ್ತೇವೆ. ಈರೀತಿ ಹಾಕುವುದರಿಂದ ಈ ಟ್ಯಾಕ್ಸ್‌ನ್ನು ನಾವು ವಸೂಲ್ಮಾಡುವುದಕ್ಕೆ ಮತ್ತು ಅವರು ನಮಗೆ ಕೊಡುವುದಕ್ಕೆ ಈ ಎರಡೂ ರೀತಿಯಲ್ಲಿ ಬಹಳ ಸುಲಭವಾಗುತ್ತದೆ. ಆದ್ದರಿಂದ ನಾನು ಇದನ್ನು ಒಪ್ಪಿಕೊಂಡಿದ್ದೇನೆ .....

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಕಾಫಿ, ಟೀ, ವಿಚಾರ ಬರಲೇ ಇಲ್ಲವಲ್ಲಾ.

ಶ್ರೀ ರಾಮಕೃಷ್ಣ ಹೆಗಡೆ.—ತಪ್ಪಿಗೆ ಗೊತ್ತಿರುವಂತೆ ಪರ್ಚೇಸ್ ಟ್ಯಾಕ್ಸ್‌ನ್ನು ಕಾಫಿಯ ಮೇಲೆ ನಾವು ಹಾಕಿದ್ದೇವೆ. ಇದರ ವಿರುದ್ಧ ಕಾಫೀ ಬೋರ್ಡ್‌ನವರು ಹೈಕೋರ್ಟಿಗೆ ರಿಟ್ ಹಾಕಿದರು. ಅವರು ರಿಟ್ ಹಾಕಿದ್ದರಿಂದ ಅದರಲ್ಲಿ ನಮಗೇ ಇನ್ನೂ ಅನುಕೂಲವಾಯಿತು. ನಂತರ ಅವರು ಸುಪ್ರೀಂ ಕೋರ್ಟಿಗೆ ಹೋಗಿದ್ದಾರೆ. ಅಲ್ಲಿ ವಾದ ವಿವಾದಗಳಾಗಿವೆ. ಇವತ್ತೋ, ನಾಳೆಯೋ, ಇದರ ಬಗ್ಗೆ ಜಡ್ಜ್‌ಮೆಂಟ್ ಬರಬಹುದು. ಆ ಜಡ್ಜ್‌ಮೆಂಟ್ ಬಂದಮೇಲೆ ಈ ಕಾಫಿಯ ಮೇಲೆ ಸೇಲ್ಸ್ ಟ್ಯಾಕ್ಸ್‌ನ್ನು ಹೆಚ್ಚು ಮಾಡಬೇಕೋ, ಕಡಿಮೆ ಮಾಡಬೇಕೋ ಎಂಬುದನ್ನು ಯೋಜನೆ ಮಾಡುತ್ತೇವೆ. ಈಗ್ಗೆ ೩ ವರ್ಷಗಳಹಿಂದೆ ಕಾಫಿಯ ಮೇಲಿದ್ದಂಥ ಸೇಲ್ಸ್ ಟ್ಯಾಕ್ಸ್‌ನ್ನು ಕಡಿಮೆ ಮಾಡಿದ್ದೆವು. ನಾವು ಸೇಲ್ಸ್ ಟ್ಯಾಕ್ಸ್‌ನ್ನು ಕಡಿಮೆ ಮಾಡಿದರೂ ಹೊರಗಡೆ ಕಾಫಿ ಬೆಲೆ ಏನೂ ಕಡಿಮೆ ಆಗಲಿಲ್ಲ. ಅಂದರೆ ಸರ್ಕಾರದವರು ಸೇಲ್ಸ್ ಟ್ಯಾಕ್ಸ್‌ನ್ನು ಕಡಿಮೆ ಮಾಡಿದರೆ ಬಳಕೆದಾರನ ಮೇಲೆ ಹೊರೆ ಕಡಿಮೆಯಾಗುತ್ತದೆಂದು ದಯವಿಟ್ಟು ಯಾರೂ ತಿಳಿದುಕೊಳ್ಳಬೇಡಿ. ಆರೀತಿ ತಿಳಿದುಕೊಂಡಿದ್ದರೆ ಅದು ಸರಿಯಿಲ್ಲ, ತಪ್ಪು.

ಶ್ರೀ ಎಂ. ಎಸ್. ಕೃಷ್ಣನ್.—ನೀವು ಕಡಿಮೆ ಮಾಡಿದರೂ ಕೂಡ ಅದರ ಬೆಲೆ ಕಡಿಮೆ ಆಗಿಲ್ಲ ಎಂದು ಹೇಳುವುದು ಸಹಜ. ಆದರೆ ನೀವು ಟ್ಯಾಕ್ಸ್‌ನ್ನು ಜಾಸ್ತಿ ಮಾಡುತ್ತೀರೆಂದು ಹೇಳಿದರೆ ಸಾಕು ಹೊರಗಡೆ ಬೆಲೆ ಜಾಸ್ತಿಯಾಗುತ್ತದೆ. ಅಂಥಾದ್ದರಲ್ಲಿ ನೀವು ಜಾಸ್ತಿ ಮಾಡಿಯೇ ಬಿಟ್ಟರೆ ಆಗ ಇನ್ನೂ ಜಾಸ್ತಿ ರೇಟ್ ಬಜಾರ್‌ನಲ್ಲಿ ಆಗುತ್ತದೆ. ಈಗ ಕಾಫಿಯ ಮೇಲೆ ಸೇಲ್ಸ್ ಟ್ಯಾಕ್ಸ್‌ನ್ನು ಜಾಸ್ತಿ ಮಾಡುತ್ತಿದ್ದೀರಿ. ತಮಗೆಲ್ಲಾ ತಿಳಿದಿರುವಂತೆ ನಮ್ಮ ಬೆಂಗಳೂರಿನಲ್ಲಿ ಕಾಫಿಯ ಬೆಲೆ ಸಾಕಷ್ಟು ಜಾಸ್ತಿಯಾಗಿದೆ. ಉದಾಹರಣೆಗೆ ಹೇಳುವುದಾದರೆ ನಮ್ಮ ಲೆಜಿಸ್ಲೇಟರ್ಸ್ ಹೋಂನಲ್ಲಿ ಒಂದು ಕಾಫಿಗೆ ೧.೭೦ ರೂ ಮಾಡಿದ್ದಾರೆ. ಇಲ್ಲೇ ಇಷ್ಟಾದರೆ ಬೇರೆ ಕಡೆ ಎಷ್ಟಾಗುತ್ತದೆ. ಇದು ಜನಸಾಮಾನ್ಯರ ಮೇಲೆ ಬೀಳುತ್ತದೆ. ದಯವಿಟ್ಟು ಇದರ ಬಗ್ಗೆ ಯೋಚನೆ ಮಾಡಿ.

SRI M. VEERAPA MOILY.—There is a mistake in Clause 8 regarding composition of the tax on hotels. The Usual, normal rate is 5% on the hotels other than the State Hotels. ಈಗ ಕಾಂಪೋಜಿಷನ್ ರೇಟ್‌ನಲ್ಲಿ ಪೈಸ್ಕೃಬ್ ಮಾಡಿದ್ದೀರಿ. ಈಗ ಯೂಷಿಯಲ್ ರೇಟ್ ಪ್ರಕಾರ The usual rate is at the rate of 5%. For Rs. 13 lakh turnover it will come to Rs. 65,000/-- I think, you can ask them to calculate it. ಏತಕ್ಕೆಂದರೆ ಕಾಂಪೋಜಿಷನ್ ಪ್ರಕಾರ ಎಷ್ಟು ಬರುತ್ತದೆ. ಅಂದರೆ ೩೮ ಲ್ಯಾಕ್ಸ್ ಇರುವವರಿಗೆ ೩೮,೭೦೦ ಬರುತ್ತದೆ. I think that could be calculated. Otherwise, your clause will become a dead letter. It cannot be enforced at all I think there is some mistake. You can calculate it. ಈಗ ನನಗನ್ನಿಸಿದ ಹಾಗೆ ಕೆಲವು ರಿಯಾಯಿತಿಗಳನ್ನು ತಾವು ಇಲ್ಲಿ ಘೋಷಣೆ ಮಾಡಿದ್ದೀರಿ. ಆದರೆ ಕೆಮಿಕಲ್ ಫರ್ಟಿಲೈಸರ್ಸ್ ಮೇಲೆ ಹಾಕಿದ್ದೀರಿ ಆದರ ಮೇಲೂ ತಾವು ರೀಯಾಯಿತಿಯನ್ನು ಘೋಷಣೆ ಮಾಡಬೇಕು. ತಪ್ಪು ಲಿಸ್ಟ್‌ನಲ್ಲಿ ಇಲ್ಲವೆಂದು ಕಾಣಿಸುತ್ತದೆ. ರೈತರ ಬಗ್ಗೆ ದೊಡ್ಡ ಭಾಷಣ ಕೊಡುತ್ತೀರಿ ಕೆಮಿಕಲ್ ಫರ್ಟಿಲೈಸರ್ಸ್ ಮೇಲೆ ರಿಯಾಯಿತಿಯನ್ನು

ಮಾಡಿಲ್ಲ. In Annexure-13, you have given goods proposed for last sale point levy in addition to the first sale point levy. ಏತಕ್ಕೆಂದರೆ ಲೋಕಲ್ ಎಂಟರ್‌ಪ್ರಿನರ್ಸ್‌ಗೆ ಎನ್‌ಕರೇಜ್ ಮಾಡುವುದಕ್ಕೆ ಹೇಳಿದ್ದೀರಿ. ಕಾಂಪಿಟರ್ ಬಗ್ಗೆ ಹೇಳಿದ್ದೀರಿ. ಕಾಂಪಿಟರ್ ಎಂದರೆ ಸಫೋಸ್ಟಿಕೇಟೆಡ್ ಇಂಡಸ್ಟ್ರೀ, ಇನ್ನು ಬಾಕಿ ಕೆಲವು ಇಂಡಸ್ಟ್ರೀಸ್ ಇದೆ. ಉದಾಹರಣೆಗೆ ಇದರಲ್ಲಿ ಏನಾಗಿದೆ ಎಂದರೆ ಫಸ್ಟ್ ಅಂಡ್ ಡಿ ಲಾಸ್ಟ್ ಪಾಯಿಂಟ್ You have levied on Bottled soft drinks and aerated waters. At least soda, you could have exempted from one point. For Bottled soft drinks and aerated waters you have proposed last sale point levy in addition to the first sale point levy 3%. At two points, it will be too high.

ಶ್ರೀ ರಾಮಕೃಷ್ಣ ಹೆಗಡೆ.—ಸೋಡ ಕಾಮನ್ ಮ್ಯಾನ್ ಕುಡಿಯುತಕ್ಕಂಥದ್ದಲ್ಲ.

SRI M. VEERAPPA MOILY.—There are some items which are used for the educational purpose. They are used by common-men or by the educational institutions. They are not luxury goods. In Annexure-14 of your Budget speech you have given. For Electrical and elec.ronic instruments sold to educational institutions for use as teaching aids you have proposed 4%. ಎಜುಕೇಷನ್ ಇನ್‌ಸ್ಟಿಟ್ಯೂಷನ್‌ಗಳಿಗೆ ಉಪಯೋಗ ಮಾಡತಕ್ಕಂಥದ್ದಕ್ಕೆ ೪ ಪರ್ಸೆಂಟ್ ಮಾಡಿದ್ದೀರಿ.

Hosiery goods made only of cotton. This is an industry. ಹೊಸೈರಿ ಗೂಡ್ಸ್ ಬೆಳಗಾಂ ಕಡೆ ಹೆಚ್ಚಿಗೆ ಇದೆ. ಎಜುಕೇಷನ್ ಇನ್‌ಸ್ಟಿಟ್ಯೂಷನ್‌ಗಳಲ್ಲಿ ಉಪಯೋಗ ಮಾಡತಕ್ಕದ್ದು 'Electronic instruments sold to educational institutions for use as teaching aids' ಅದಕ್ಕೆ ೪ ಪರ್ಸೆಂಟ್ ಪ್ರೊಪೋಸ್ ಮಾಡಿದ್ದೀರಿ. ತಾವು ರಿಯಾಯಿತಿ ಡಿಕ್ಲೇರ್ ಮಾಡಿದ್ದರಲ್ಲಿ ಇದು ಇಲ್ಲ. ಟೀಚಿಂಗ್ ಏಡ್ಸ್‌ಗೆ ಎಕ್ಸೆಂಪ್ಷನ್ ಕೊಟ್ಟಿಲ್ಲ. Hosiery goods made only of cotton 2% ಹಾಕಿದ್ದೀರಿ. ಹೊಸೈರಿ ಗೂಡ್ಸ್‌ನಲ್ಲಿ ಈಗ ಪಂಜಾಬ್, ಲೂಧಿಯಾನವನ್ನು ಕಾಂಪೀಟ್ ಮಾಡುವುದಕ್ಕೆ ಸಾಧ್ಯವಿಲ್ಲ. ಇದ್ದ ಇಂಡಸ್ಟ್ರಿಗಳು ಕೂಡ ಹೋಗುತ್ತಿವೆ. ಬೆಳಗಾಂ ಮತ್ತಿತರ ಕಡೆ ಇರತಕ್ಕ ಇಂಡಸ್ಟ್ರೀಸ್‌ಗೆ ಎಫೆಕ್ಟ್ ಆಗುತ್ತದೆ. ಅದನ್ನು ಪುನರ್ ಪರಿಶೀಲನೆ ಮಾಡುವುದು ಒಳ್ಳೆಯದೆಂದು ಅನ್ನಿಸುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.— ಮೊದಲು ಇದ್ದುದನ್ನು ತೆಗೆದುಹಾಕಿ ನೋಡಿದ್ದು ಆಯಿತು. ಆದರಿಂದ ವಿಶೇಷ ಉತ್ತೇಜನ ಏನೂ ಸಿಕ್ಕಲಿಲ್ಲ. ಆದಕ್ಕಾಗಿ ಈಗ ಪುನಃ ಹಾಕಿದ್ದೇವೆ ಅಷ್ಟೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಒಳ್ಳೆಯ ಐಡಿಯ. But, this is going to hit them. Safety matches and stainless steel ನಿಂದ local enterpreneursಗೆ ಎಫೆಕ್ಟ್ ಆಗುತ್ತದೆ. ಮಲ್ಟಿ ಪಾಯಿಂಟ್ ಆಗುತ್ತದೆ. 3 times they have to pay. It will become ultimately 21% ಲೋಕಲ್ ಮ್ಯಾನ್ಯುಫ್ಯಾಕ್ಚರ್ ಮಾಡಿದವನಿಗೆ ೩ ಸಾರಿ ೩ ಸಾರಿ ಅಂದರೆ, ೨೧ ಪರ್ಸೆಂಟ್ ಆಗುತ್ತದೆ. ಲೋಕಲ್ ಮ್ಯಾನುಫ್ಯಾಕ್ಚರ್ ಏನಿದ್ದಾನೆ ಅವನು ೨೧ ಪರ್ಸೆಂಟ್ ಪೇ ಮಾಡಬೇಕಾಗುತ್ತದೆ, as a result of this particular increase. ಸೇಫಟಿ ಮ್ಯಾಚಸ್‌ನಲ್ಲಿ ಶಿವಕಾಶಿಯಿಂದ ಸ್ಮಾಕ್ ಇಲ್ಲಿಗೆ ಬರುತ್ತದೆ. They will evade the tax. It will again hit our industries. Safety matches industries are suffering. There is a set-back. They have to pay 21% just for the sake of starting an industry in Karnataka. Same thing will happen with the local stainless steel industry also. All stainless steel goods are coming from outside. That includes many of the medical equipments and surgical equipments. In tenders, in Health

Department, they qoute it at a lower price. You are totally eliminating the local manufacturers. They will totally monopolise There fore it is totally unjustified. Particularly, you will wipe out those local enterpreneurs, with regard to the safety matches and also stainless steel. ಅದನ್ನು ಸರಿಮಾಡಬೇಕು. These are the days when we have to go for the single-point ಆದರೆ ತಾವು ದ್ವಿಮುಖ ದೃಷ್ಟಿಯಲ್ಲಿ ಹೋಗುತ್ತಿದ್ದೀರಿ I do not know the policy. This is not a progressive policy with regard to taxation.

SRI RAMAKRISHNA HEGDE.—At least in respect of 25 to 30 items I have shifted from multi-point tax to single point tax. ನಿಮ್ಮ ಕಾಲದಲ್ಲಿ, ಇತ್ತಲ್ಲ ಆದರಲ್ಲಿ ೨೫-೩೦ ಐಟಂಗಳಿಗೆ ಚೇಂಜ್ ಮಾಡಿದ್ದೇವೆ.

SRI M. VEERAPPA MOILY.—That was the recommendation of the Taxation Review Committee We have instituted the Taxation Review Committee. ಅವರ ರೆಕಮೆಂಡೇಷನ್ ಇದೆ. Even we would have done that, because it was the part of the recommendations. ಗುಲ್ಜಾಟಿ ಕಮಿಟಿ ಮತ್ತು ಡಾ. ಹೊನ್ನಾವರ ಕಮಿಟಿಯವರು ೧೯೮೩ ರಲ್ಲಿ ರಿಪೋರ್ಟ್ ಕೊಟ್ಟಿದ್ದಾರೆ. ಅದರಲ್ಲಿ ಕೆಲವು ಇಂಪ್ಲಿಮೆಂಟ್ ಮಾಡಿದ್ದೀರಿ. ಆದರೆ ಕೆಲವು ಇಂಡಸ್ಟ್ರೀಸ್‌ಗೆ ಮಲ್ಟಿಪಾಯಿಂಟ್‌ಗೆ ಹೋದದ್ದರಿಂದ will be a retrogressive step; it is not a progressive step at all. ಇನ್ನು ಫೋಟೊ ಕೊಡಬೇಕೆಂದು ಹೊಸದಾಗಿ ಇಂಟ್ರೊಡ್ಯೂಸ್ ಮಾಡುತ್ತಿದ್ದೀರಿ. I think the specimen signature will do. Traders, ಅವರೇನೂ ಕ್ರಿಮಿನಲ್ಸ್ ಅಲ್ಲ. ಒಂದು ವರ್ಷ ಗಡ್ಡ ಇಡುತ್ತಾರೆ. ಒಂದು ವರ್ಷ ಗಡ್ಡ ತೆಗೆಯುತ್ತಾರೆ. Every year you have to change the photo.

ಶ್ರೀ ರಾಮಕೃಷ್ಣ ಹೆಗಡೆ.—ಮುಖ ಇರುತ್ತಲ್ಲ.

ಶ್ರೀ ವೀರಪ್ಪ ಮೊಯಿಲಿ.—ಮುಖ ಅದೇ ಇರುತ್ತದೆ. But you may have to change the photo every year. I don't think that is a practical step. ಏಕೆಂದರೆ ಅವಾಯಿಡ್ ಮಾಡುತ್ತಾರೆ ಎಂಬ ಉದ್ದೇಶ ತಮ್ಮದಿರಬಹುದು. ಅಥವಾ ಬೇನಾಮಿ ಟ್ರೇಡ್ ಮಾಡುತ್ತಾರೆ ಎಂದು ಇರಬಹುದು. Specimen signature can meet the situation. ಫೋಟೊ ತೆಗೆದು ಕೊಡಬೇಕಾದ ಅವಶ್ಯಕತೆ ಇಲ್ಲ. Earlier it was not there at all. ಹೋದ ಸಾರಿ ಕೆಲವು ಸೂಚನೆಗಳನ್ನು ಕೊಟ್ಟಿದ್ದೆ. ಬೆಟ್ಟಿಂಗ್ ಟ್ಯಾಕ್ಸ್ ಬಗ್ಗೆ ನಾನು ಹೇಳಿದ್ದೆ. Of course, you have now realised and coming back to the same position. We welcome it. Last time we suggested that you should not go in for that. Of course, you have comeback. ಬೆಟ್ಟಿಂಗ್ ಟ್ಯಾಕ್ಸ್ ಬಹಳ ಕಡಿಮೆಯಾಗಿದೆ. ಆದ್ದರಿಂದ, ಈಗ ಕೆಲವು ರಿಯಾಯಿತಿಯನ್ನು ಏನು ಕೊಟ್ಟಿದ್ದೀರಿ, ಅದರ ಜೊತೆಗೆ ನ್ಯಾಯವಾಗಿ ಇನ್ನೂ ಕೆಲವು ರಿಯಾಯಿತಿಯನ್ನು ಎಕ್ಸ್‌ಟೆಂಡ್ ಮಾಡಬೇಕಾದ ಅವಶ್ಯಕತೆ ಇದೆ. ಅದನ್ನು ಪುನರ್‌ಪರಿಶೀಲನೆ ಮಾಡುತ್ತಾರೆಂದು ನಾನು ನಂಬುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಕೆಲವು ಸಂದರ್ಭದಲ್ಲಿ ನಾವು ಟ್ಯಾಕ್ಸ್ ರೇಟ್ ಕಡಿಮೆ ಮಾಡಿದರೆ ಅದರಿಂದ ಬರತಕ್ಕಂಥ ಆದಾಯ ಹೆಚ್ಚಾಗುತ್ತದೆ. ಉದಾಹರಣೆಗೆ ಅಗ್ರಿಕಲ್ಚರಲ್ ಮಾರ್ಕೆಟ್ ಸೆಸ್ ತೆಗೆದುಕೊಳ್ಳಿ. ೨ ಪರ್ಸೆಂಟ್ ಇದ್ದುದನ್ನು ೧ ಪರ್ಸೆಂಟ್ ಮಾಡಿದ್ದೇವೆ. ಅದರಿಂದ ಬರತಕ್ಕ ಆದಾಯ ಸ್ವಲ್ಪ ಹೆಚ್ಚಾಯಿತು. ಅದೇ ದೃಷ್ಟಿಯಿಂದ ಬೆಟ್ಟಿಂಗ್ ಟ್ಯಾಕ್ಸನ್ನು ನಾವು ಕಡಿಮೆ ಮಾಡಿದ್ದೇವೆ ಇವೇಷನ್ ಆಗತಕ್ಕದ್ದು ಕಡಿಮೆಯಾಗಬಹುದು, ಆದಾಯ ಹೆಚ್ಚು ಬರಬಹುದು ಎಂಬ ಆಸೆ ಇತ್ತು. ಆದರೆ ಅನುಭವದಿಂದ ಏನಾಯಿತು ಎಂದರೆ ಕಡಿಮೆ ಆಗಲಿಲ್ಲ ಹೆಚ್ಚೂ ಆಗಲಿಲ್ಲ. ಸ್ವಲ್ಪವಂಟ್ಟಿಗೆ ತಮೆಯೇ ಆಗಿರಬೇಕು ಎಂದು ನನಗನ್ನಿಸುತ್ತದೆ. ಆದ್ದರಿಂದ ಪುನಃ ಮೊದಲನೆಯ ಪಟ್ಟಕ್ಕೆ ಇದನ್ನು

ಏರಿಸಿದ್ದೇವೆ. ಮಾನ್ಯ ಮೊಯಿಲಿಯವರು ಕಾಂಪೊಸಿಷನ್ ವಿಚಾರದಲ್ಲಿ ಒಂದು ಮಾತು ಹೇಳಿದರು. ದಿವಸಕ್ಕೆ ೩೫ ರೂಪಾಯಿಗಳ ಹಾಸಿಗೆ ಚಾರ್ಜ್ ಮಾಡತಕ್ಕ ಹೋಟೆಲ್ ಉದಾಹರಣೆ ಕೊಟ್ಟರು.

SRI M. VEERAPPA MOILY.—Other than Star hotels.

SIR RAMAKRISHNA HEGDE.—Other than star hotels, ಆದಕ್ಕೆ ಬೇಸಿಕ್ ದರ ೫೫ ಪರ್ಸೆಂಟ್ ಮತ್ತು ಟರ್ನ್ ಓವರ್ ಟ್ಯಾಕ್ಸ್ ೧೨೫ ಪರ್ಸೆಂಟ್ ಈ ಎರಡನ್ನೂ ಸೇರಿಸಿದರೆ ೧೫೫ ಲಕ್ಷ ಟರ್ನ್ ಓವರ್ ಆಗುತ್ತದೆ ಎಂಬ ಆಧಾರದ ಮೇಲೆ ರೇಟ್ ಆಫ್ ಟ್ಯಾಕ್ಸ್ including ಟರ್ನ್ ಓವರ್ ಟ್ಯಾಕ್ಸ್ ೮೧,೨೫೦ ರೂಪಾಯಿಗಳು ಆಗುತ್ತದೆ. ಟರ್ನ್ ಓವರ್ ಟ್ಯಾಕ್ಸ್ ಬಿಡುವುದಕ್ಕೆ ಬರುವುದಿಲ್ಲ. ಕಾಂಪೊಸಿಷನ್ ಮಾಡಿದರೆ ೬೮,೭೫೦ ರೂಪಾಯಿ ಆಗುತ್ತದೆ. ನಿಮ್ಮ ಲೆಕ್ಕದಲ್ಲಿ ಟರ್ನ್ ಓವರ್ ಟ್ಯಾಕ್ಸ್ ಬಿಟ್ಟಿದ್ದರಿಂದ ಅದು ಕಡಿಮೆಯಾಗಿ ಕಾಣುತ್ತದೆ ಅಷ್ಟೆ. ಆಮೇಲೆ ಸ್ಟೈನ್‌ಲೆಸ್ ಸ್ಟೀಲ್ ವಿಚಾರದಲ್ಲಿ ಮತ್ತು ಸೇಫ್ಟಿ ಮ್ಯಾಚಸ್ ಬಗ್ಗೆ ಹೇಳಿದ್ದಾರೆ. ಮಲ್ಟಿಪಾಯಿಂಟ್ ತೆಗೆದು ಸಿಂಗಲ್ ಪಾಯಿಂಟ್ ಮಾಡಿ ಪುನಃ ಮಲ್ಟಿಪಾಯಿಂಟ್ ಮಾಡುತ್ತಿದ್ದೀರಿ ಎಂದು ಹೇಳಿದ್ದಾರೆ. ಎಲ್ಲೆಲ್ಲಿ ಇಂಪೇಷನ್ ಆಗುತ್ತಿದೆ ಎಂದು ಪ್ರತ್ಯಕ್ಷವಾಗಿ ಕಂಡು ಬಂತು ಅಂಥ ಪ್ರಸಂಗದಲ್ಲಿ ಮಾತ್ರ ಮಲ್ಟಿ ಪಾಯಿಂಟ್‌ಗೆ ನಾನು ವಾಪಸ್ ಹೋಗಿದ್ದೇವೆ. ಅಥವಾ ಸೇಲ್ ಮತ್ತು ಪರ್ಚೇಸ್ ಪಾಯಿಂಟ್ ಎರಡರಲ್ಲೂ ಹಾಕಿದ್ದೇವೆ. ಲಿಕ್ಕರ್ ವಿಚಾರದಲ್ಲಿ ಹೇಳುವುದಾದರೆ, ಫಸ್ಟ್ ಸೇಲ್ ಮತ್ತು ಲಾಸ್ಟ್ ಸೇಲ್ ಎರಡೂ ಕಡೆ ತೆರಿಗೆ ಹಾಕಿದ್ದೇವೆ. ಮೊದಲು ತಪ್ಪಿಸಿಕೊಂಡರೂ ಕೊನೆಯಲ್ಲಿ ತಪ್ಪಿಸಿಕೊಳ್ಳುವುದನ್ನು ತಡೆಹಿಡಿಯಬೇಕೆಂಬ ಉದ್ದೇಶದಿಂದ ಮಾಡಿದ್ದೇವೆ. ಬಾಕಿ ಸೂಚನೆಯನ್ನು ನಾನು ಗಮನದಲ್ಲಿಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ಆಗಲೀ ಮಾನ್ಯ ಮುಖ್ಯ ಮಂತ್ರಿಗಳು ಹಲವಾರು ವಿಷಯಗಳ ಬಗ್ಗೆ ವಿವರಣೆ ಕೊಟ್ಟಿದ್ದಾರೆ. ಕೆಲವು ರಿಯಾಯಿತಿಯನ್ನೂ ತೋರಿಸಿದ್ದಾರೆ. ಮಾನ್ಯ ಲಕ್ಷ್ಮೀಸಾಗರ್ ಅವರು ಮಾತನಾಡುತ್ತಾ ಸರ್ಕಾರಕ್ಕೆ ಹಣ ಇಲ್ಲ, ಆದ್ದರಿಂದ ಹಣ ಬೇಕು, ಕೊರತೆ ಭರ್ತಿ ಮಾಡುವುದಕ್ಕಾಗಿ ವಸೂಲು ಮಾಡಬೇಕು ಎಂದು ಹೇಳಿದರು. ಈ ಸ್ಲೋಗಾನ್ ಇದ್ದೇ ಇರುತ್ತದೆ. ಪರ್ಮನೆಂಟ್ ಇದು. ಸರ್ಕಾರ ಇರುವತನಕ ಕೊರತೆ ಇರುತ್ತದೆ. ಕೊರತೆ ಇರುವವರೆಗೆ ತೆರಿಗೆ ಹಾಕಬೇಕೆಂಬ ಘೋಷಣೆ ಇರುತ್ತದೆ. ಹಾಗೆಂದರೆ ಏರಿಸುತ್ತಾನೇ ಹೋಗಬೇಕಾಗುತ್ತದೆ. ತೆರಿಗೆ ಭಾರ ಯಾರ ಮೇಲೆ ಬೀಳುತ್ತದೆ ಎಂಬುದು ಮುಖ್ಯವಾದ ಅಂಶ.

ಯಾವಾಗಲೂ ಈ ಒಂದು ಮನೆಯಲ್ಲಿ ತೆರಿಗೆಯನ್ನೇ ಹಾಕಕೂಡದು ಎಂದು ಹೇಳುವಂತಹ ಜನ ಇರುವುದಿಲ್ಲ. ನಮ್ಮ ಸರ್ಕಾರ ಇರಬಹುದು. ನಿಮ್ಮ ಸರ್ಕಾರ ಇರಬಹುದು. ಕಾಂಗ್ರೆಸ್ ಸರ್ಕಾರ ಬರಬಹುದು. ಯಾವುದೇ ಸರ್ಕಾರ ಇದ್ದರೂ ಕೂಡ ತೆರಿಗೆಯನ್ನು ಹಾಕಬೇಕಾಗಿ ಬರುತ್ತದೆ. ಆದರೆ ತೆರಿಗೆಯನ್ನು ಹಾಕಿದಾಗ ಅದರ ಹೊರೆ ಬೀಳುತ್ತದೆ. ಆ ಹೊರೆ ಯಾರ ಮೇಲೆ ಬೀಳುತ್ತದೆಂಬುದು ಮುಖ್ಯವಾದುದು. ಜನಸಾಮಾನ್ಯರ ಮೇಲೆ ತೆರಿಗೆಯ ಹೊರೆ ಬೀಳುತ್ತದೆ. ಆ ರೀತಿಯ ಹೊರೆ ಜನ ಸಾಮಾನ್ಯರ ಮೇಲೆ ಬೀಳಕೂಡದು. ಕೊಡುವಂತಹ ಶಕ್ತಿ ಇರುವಂತಹರ ಮೇಲೆ ತೆರಿಗೆಯ ಹೊರೆ ಬೀಳಲಿ. ಯಾರು ಶ್ರೀಮಂತರೋ ಇದ್ದಾರೋ ಅವರ ಮೇಲೆ ತೆರಿಗೆಯ ಹೊರೆಗೆ ಬೀಳಲಿ. ಆದರೆ ಅಂತಹ ಉದ್ದೇಶದಿಂದ ಸೇಲ್ಸ್‌ಟ್ಯಾಕ್ಸ್‌ನ ವಿಚಾರದಲ್ಲಿ ಮಾಡಿಲ್ಲ, ಆ ಉದ್ದೇಶ ಇದರಲ್ಲಿಲ್ಲ ಎಂಬುದು ನನ್ನ ಅಭಿಪ್ರಾಯ. ಆದರೆ ಆಧಾರದ ಮೇಲೆ ಮಾನ್ಯ ಮುಖ್ಯ ಮಂತ್ರಿಗಳು ಇನ್ನೂ ಕೂಡ ಪರಿಶೀಲನೆ ಮಾಡಬೇಕಾಗಿತ್ತು. ಆದರೆ ಆ ಬಗ್ಗೆ ಮಾಡಲಿಲ್ಲವೆಂದು ನಾನು ಹೇಳುತ್ತೇನೆ. ಇದರ ಬಗ್ಗೆ ನಾನೂ ಕೂಡ ತಿದ್ದುಪಡಿಯನ್ನು ಕಳುಹಿಸಿದ್ದೇನೆ ಏಕೆಂದರೆ ಆಮೇಲೆ ಕ್ಲಾಸ್‌ಬೈ ಕ್ಲಾಸ್ ತೆಗೆದುಕೊಂಡಾಗ ಮೂವ್ ಮಾಡುತ್ತೇನೆ. ಕೆಲವೊಂದರ ಬಗ್ಗೆ ಮಾನ್ಯ ಮೊಯಿಲಿಯವರು ಹೇಳಿದ್ದಾರೆ.

ಶ್ರೀ ಎಂ. ವೀರಪ್ಪಮೊಯ್ಲಿ.—ರಿಯಾಯಿತಿಯನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ. ಅದರಿಂದ ಎಷ್ಟು ಸರ್ಕಾರಕ್ಕೆ ನಷ್ಟವಾಗುತ್ತದೆಂಬುದನ್ನು ಹೇಳುತ್ತೀರಾ ?

ಶ್ರೀ ರಾಮಕೃಷ್ಣಹೆಗಡೆ.—ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಕ್ಲಾಸ್ ೧೫ರಲ್ಲಿ "All hosirey goods made wholly of cotton except hosiery cloth in length"...೭% ಹಾಕಿದ್ದೀರಿ. ನಾನೂ ಸಹ ಈ ಒಂದು ವಿಷಯದಲ್ಲಿ ಹೇಳುವುದಾದರೆ ಎಲ್ಲಾ ಹೊಸೈರಿ ಕೈಗಾರಿಕೆಗಳು ಹೋಗುತ್ತವೆ ನಿಮ್ಮ ಆರ್ಗ್ಯುಮೆಂಟ್ ಕೇಳಿದೆ. ನೀವು ಏನು ಹೇಳಿದಿರೆಂದರೆ, ಹಾಕಿದಾಗ ಅವುಗಳು ಮುಂದೆ ಬರಲಿಲ್ಲ, ಆದ್ದರಿಂದ ತಿರುಗಿ ಹಾಕಿದ್ದೇವೆಂದು ಹೇಳಿದಿರಿ. ಇದು ಸರಿಯಾದ ವಾದ ಅಲ್ಲ. ಇದರಿಂದ ಹೊಸೈರಿ ಕೈಗಾರಿಕೆಗಳು ಮುಳುಗಿ ಹೋಗುತ್ತವೆ. ಖಂಡಿತವಾಗಿ ಅವುಗಳು ಉಳಿಯುವುದಕ್ಕೆ ಸಾಧ್ಯವಿಲ್ಲ. ಈ ಆಧಾರದ ಮೇಲೆ ಮಾತನಾಡಿದರೆ ಸರಿಯಿಲ್ಲ ನಿಮ್ಮ ಆರ್ಗ್ಯುಮೆಂಟ್ ಸಮಂಜಸವಾದುದಲ್ಲ. ನಂತರ Bilcyles, tandum cycles, cycle combinations and parts and accessories and tyres Vanaspathi including dalda, Pakav of other hydrogenated oils by whatever name called (and cooking medium other than those specified in serial number 47) and tubes there of, perambulators, children's bicycles and similar articles ಇದಕ್ಕೂ ೩ ಪರ್ಸೆಂಟ್ ಹಾಕಿದ್ದೀರಿ. ಹಿಂದೆ ಯಾವಾಗಲೂ ಇವುಗಳಿಗೆ ಟ್ಯಾಕ್ಸೇ ಇರಲಿಲ್ಲ. ಹೊಸ ಐಟಂ ಆಗಿ ಇದರಲ್ಲಿ ಸೇರಿಸಿದ್ದೀರಿ. ಇದು ಯಾರ ಮೇಲೆ ಬೀಳುತ್ತದೆ ಎಂದರೆ ಮುಖ್ಯವಾಗಿ, ಗ್ರಾಮಾಂತರ ಪ್ರದೇಶದ ಜನರ ಮೇಲೆ ಇದು ಬೀಳುತ್ತದೆ. ಗ್ರಾಮಾಂತರ ಪ್ರದೇಶದ ಜನರ ಬಗ್ಗೆ ಮಾತನಾಡುತ್ತಾರೆ. ಸೈಕಲ್ಲನ್ನು ಉಪಯೋಗಿಸುವಂತಹವರು ಹೆಚ್ಚಾಗಿ ಗ್ರಾಮಾಂತರ ಪ್ರದೇಶದ ಜನರು. ಗ್ರಾಮಾಂತರ ಪ್ರದೇಶದ ಜನರು ಉಪಯೋಗಿಸುವಂತಹ ಸೈಕಲ್ ಮೇಲೆ ತೆರಿಗೆಯನ್ನು ಹಾಕುವುದರ ವಿರುದ್ಧ ಅನೇಕ ವರ್ಷಗಳಿಂದ ನಾನು ಕೇಳುತ್ತಿದ್ದೇನೆ. ಈ ವಾದವನ್ನು ನೀವು ಫೈನಾನ್ಸ್ ಮಿನಿಸ್ಟರ್ ಆಗಿದ್ದಾಗ ಮಾಡಿದಾಗ ಅದನ್ನು ನೀವು ಒಪ್ಪಿಕೊಂಡು ಆಗ ತೆರಿಗೆಯನ್ನು ಅದರ ಮೇಲೆ ಹಾಕಲಿಲ್ಲ. ಆಗ ಹಾಕದೇ ಇರುವಂತಹ ಯೋಚನೆ ಈಗ ಏಕೆಂದು ಯೋಚನೆ ಬಂತು ? ಇದು ಜನ ಸಾಮಾನ್ಯರ ಮೇಲೆ ಹೊರೆಯಾಗುವುದಿಲ್ಲವೆ ? ಇದರಿಂದ ತೆರಿಗೆ ನಿಮಗೆ ಬರಬಹುದು. ಗ್ರಾಮೀಣ ಪ್ರದೇಶದ ಜನರು ಹೆಚ್ಚಾಗಿ ಉಪಯೋಗಿಸುವಂತಹದ್ದೇ ಸೈಕಲ್ಲು. ಇವತ್ತಿನ ದಿನ ಒಂದು ಸೈಕಲ್ಲು ೬೦-೭೦ ರೂಪಾಯಿಗಳು ಇಲ್ಲವೆ ಸಿಕ್ಕುವುದಿಲ್ಲ. ಅದರ ಮೇಲೆ ನೀವು ೩ ಪರ್ಸೆಂಟ್ ತೆರಿಗೆಯನ್ನು ಹಾಕಿದರೆ ಅದು ತೀರಾ ಹೊರೆಯಾಗುತ್ತದೆ. ಆದ್ದರಿಂದ ಅದನ್ನು ರೀ-ಕನ್ಸಿಡರ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿ ಇನ್ನೂ ೨-೩ ವಿಷಯಗಳ ಬಗ್ಗೆ ಹೇಳುವುದಾದರೆ,

> "Vanaspathi including dalda, Pakav or other hydrogenated oils by whatever name called (and cooking medium other than those specified in serial number 47)"

ಅದರಲ್ಲಿ ground nut oil, coconut oil and edible etc. ಅದಕ್ಕೆ ೩ ಪರ್ಸೆಂಟ್ ಇದೆ. ಆದರೆ ವನಸ್ಪತಿ ಇನ್‌ಕ್ಲೂಡಿಂಗ್ ದಾಲ್ಡಾ, ಪಕಾವ್ ಇದಕ್ಕೆಲ್ಲಾ ೮ ಪರ್ಸೆಂಟ್ ಇದ್ದುದನ್ನು ೧೦ ಪರ್ಸೆಂಟ್‌ಗೆ ಹೆಚ್ಚು ಮಾಡಿದ್ದೀರಿ, ಇದನ್ನೆಲ್ಲಾ ಸಾಮಾನ್ಯವಾಗಿ ಮಿಡ್ಲ್ ಕ್ಲಾಸ್ ಪೀಪಲ್ಸ್ ಉಪಯೋಗಿಸುವಂತಹ ದಿನ ಬಳಕೆಯ ವಸ್ತುಗಳೇ ಇವು ಇದರಿಂದ ಹಣದುಬ್ಬರ ಜಾಸ್ತಿಯಾಗುತ್ತದೆ ಎಂಬುದಾಗಿ ಹೇಳಿದಾಗ, ಇಲ್ಲವೆಂದು ತಾವು ಉತ್ತರ ಕೊಟ್ಟಿರಿ. ಈಗ ನೋಡಿದರೆ ಇದರಿಂದಾಗಿ ಹಣದುಬ್ಬರ ಆಗುತ್ತದೆಯೋ ಅಥವಾ ಇಲ್ಲವೋ ಹೇಳಿ. ಆದರೆ ಇದರ ಕೈಗಾರಿಕೆ ಮಾತ್ರ ಹೋಗುವುದಿಲ್ಲ. ಏಕೆಂದರೆ ಅದು ಬೇಕೆ ಬೇಕು. ಬೆಲೆ ಜಾಸ್ತಿಯಾದರೂ ಜನ ಕೊಂಡುಕೊಳ್ಳಲೆ ಬೇಕು. ಇದರಿಂದ ಬೆಲೆಗಳು ಜಾಸ್ತಿಯಾಗುತ್ತದೆ. ಜನರಿಗೆ ತೆರಿಗೆಯ ಹೊರೆಯೂ ಕೂಡ ಜಾಸ್ತಿಯಾಗುತ್ತದೆ. ನಾವು ಎಲ್ಲಾ ತೆರಿಗೆಗಳನ್ನು ವಿರೋಧ ಮಾಡುತ್ತಿಲ್ಲ. ಕೆಲವು ತೆರಿಗೆಗಳನ್ನು ನೀವು ಏನು ಹಾಕಿದ್ದೀರಿ ಅದರ ಬಗ್ಗೆ ಪುರ್ನವಿಮರ್ಶೆ ಮಾಡುವುದು ಒಳ್ಳೆಯದು. ಅದೇ ರೀತಿ ಳಿಷನೇ ಐಟಮ್ಮಿನಲ್ಲಿ, Coffee, that is to say, any one of the forms of coffee such as coffee benas, coffee powder, (including french coffee but not including coffee drink)" you have levied tax from the existing 10% to 13%. ಕಾಫಿ ಮತ್ತು ಟೀ ಮೇಲೆ ೧೦ ಪರ್ಸೆಂಟ್‌ನಿಂದ ೧೩ ಪರ್ಸೆಂಟ್‌ಗೆ ಟ್ಯಾಕ್ಸ್ ಹೆಚ್ಚು ಮಾಡಿದ್ದೀರಿ. ೩ ಪರ್ಸೆಂಟ್ ಜಾಸ್ತಿಯಾದ್ದರಿಂದ ನಿಮಗೆ ಎಷ್ಟು ಆದಾಯ ಬರುತ್ತದೆಂದು ಗೊತ್ತಿಲ್ಲ. ಈ ಬಗ್ಗೆ ಜನ

ಖಂಡಿತಾ ನಿಮಗೆ ಶಾಪ ಹಾಕಂತ್ತಾರೆ. ಸಾಮಾನ್ಯ ಜನ ಕುಡಿಯಂತಕ್ಕ ಕಾಫಿ, ಟೀ ಮೇಲೆ ಇಷ್ಟು ಟ್ಯಾಕ್ಸ್ ಹೆಚ್ಚು ಮಾಡಿದರೆ ಅವರ ಗತಿ ಏನು ?ಇದರಿಂದ ಕಾಫಿ ಹಾಗೂ ಟೀ ಬೆಲೆ ೧ ರೂ. ಇರುವುದು ೨ ರೂಪಾಯಿಗಳಿಗೂ, ೨ ರೂಪಾಯಿ ಇರುವುದು ೩ ರೂಪಾಯಿಗಳಿಗೂ ಏರಿದರೆ ಸಾಮಾನ್ಯ ಜನರ ಗತಿ ಏನು ? ಧಾರವಾಡದಲ್ಲಿ ಸಾಮಾನ್ಯ ಜನ ಚಹಾ ತೆಗೆದುಕೊಳ್ಳುತ್ತಾರೆ. ಕಾಫಿ, ಟೀ ಮೇಲೆ ಇಷ್ಟು ತೆರಿಗೆ ಹಾಕುವುದು ಸರಿಯಲ್ಲವೆಂದು ಹಾಗೂ ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಈಗಲಾದರೂ ಇದರ ಬಗ್ಗೆ ಗಮನ ಕೊಡಬೇಕೆಂದು ಹೇಳುತ್ತೇನೆ. ಇನ್ನು ಆರ್ಟಿಕಲ್ ೬೫ (ಎ ನಲ್ಲಿ ಟಾಯಲೆಟ್ ಸೋಪ್‌ಗೆ ೧೦ ಪರ್ಸೆಂಟ್ ಇದ್ದದ್ದನ್ನು ೧೫ ಪರ್ಸೆಂಟ್‌ಗೆ ಏರಿಸಿದ್ದೀರಿ. ಇದು ಲಕ್ಷುರಿ ಐಟಮ್ ಅಲ್ಲ. ಸಾಮಾನ್ಯ ಜನ ಉಪಯೋಗಿಸುವ ಎಲ್ಲದರ ಮೇಲೆ ೩ ಪರ್ಸೆಂಟ್ ಹೆಚ್ಚು ಮಾಡಿದ್ದೀರಿ. ಮಲ್ಟಿ ನ್ಯಾಷನಲ್ ಕಂಪೆನಿಗಳು ಏನಿವೆ, ಹಿಂದೂಸ್ಥಾನ್ ಲಿವರ್ಸ್ ಆಗಲೀ, ಗಾದ್ರೇಜ್ ಆಗಲೀ, ಟಾಟಾ ಆಗಲೀ ಇವುಗಳು ಖಂಡಿತವಾಗಿ ಬೆಲೆ ಹೆಚ್ಚು ಮಾಡಿ ಜನರ ಮೇಲೆ ಭಾರ ಏರುತ್ತವೆಯೇ ಹೊರತು ತಾವೇ ಈ ಹೆಚ್ಚುವರಿಯನ್ನು ಅಬ್ಸರ್ವ್ ಮಾಡಿಕೊಳ್ಳುವುದಿಲ್ಲ. ತಾವು ಮಾಡಿಕೊಳ್ಳುವ ಲಾಭವನ್ನು ಮಾಡಿಕೊಂಡು ಹೋಗುತ್ತವೆ. ಫೋಲ್ಡಿಂಗ್ ಅಂಬ್ರೆಲಾ ಮೇಲೆ ಇದ್ದ ೧೦ ಪರ್ಸೆಂಟನ್ನು ೬ ಪರ್ಸೆಂಟ್‌ಗೆ ಇಳಿಸಿದ್ದೀರಿ. ಇದು ಒಳ್ಳೆಯ ಕೆಲಸವಾದ್ದರಿಂದ ಶ್ಲಾಘನೆ ಮಾಡುತ್ತೇವೆ. ಅಂಬ್ರೆಲಾ ಸಾಮಾನ್ಯ ಜನರು ಉಪಯೋಗಿಸುವ ವಸ್ತು. ಈ ರೀತಿಯ ರಿಯಾಯಿತಿಯನ್ನು ಬೇರೆಯ ವಸ್ತುಗಳ ಮೇಲೆ ಕೂಡಾ ತೋರಿಸಬೇಕು. ಕನ್ನಡಕ ಹಾಗೂ ಸಂಬಂಧಪಟ್ಟ ಇನ್ನಿತರ ವಸ್ತುಗಳ ಮೇಲೆ ೧೦ ಪರ್ಸೆಂಟ್ ಇದ್ದದ್ದನ್ನು ೬ ಪರ್ಸೆಂಟ್‌ಗೆ ಇಳಿಸಿದ್ದೀರಿ. ಇದಕ್ಕೂ ಕೂಡಾ ತಮಗೆ ವಂದನೆ ಸಲ್ಲಿಸಬೇಕು. ಎಲ್ಲಾ ವಸ್ತುಗಳಿಗೂ ತೆರಿಗೆ ಇಳಿಸಬೇಕು ಎಂದರೆ ನಾವು ಹೇಗೆ ಸರ್ಕಾರ ನಡೆಸಬೇಕು ಕಾಂಗ್ರೆಸ್‌ನವರು ಅಧಿಕಾರ ನಡೆಸಿದಾಗಲೂ ಕೇಳಿದ್ದಾರೆ. ನೀವೂ ಕೂಡಾ ಕೇಳಿದ್ದೀರಿ,ನಾವು ಜನ ಸಾಮಾನ್ಯರು ಬಳಸಂಪ ವಸ್ತುಗಳ ಮೇಲೆ ತೆರಿಗೆ ಹಾಕಿದಾಗ ತಪ್ಪು ಎಂದು ಹೇಳುತ್ತೇವೆಯೇ ಹೊರತು ಎಲ್ಲಾ ವಸ್ತುಗಳ ಮೇಲೆ ತೆರಿಗೆ ಇಳಿಸಿ ಎಂದು ನಾವು ಹೇಳಿ ಹೋಗುವುದಿಲ್ಲ ಇವತ್ತು ದ್ವಿದಳಧಾನ್ಯಗಳ ಮೇಲೆ ೨ ಪರ್ಸೆಂಟ್ ಇದ್ದದ್ದನ್ನು ೪ ಪರ್ಸೆಂಟ್ ಮಾಡಿದ್ದೀರಿ. ಇದು ಜನ ಸಾಮಾನ್ಯರು ಉಪಯೋಗಿಸುವ ವಸ್ತು. ಇದನ್ನೆಲ್ಲಾ ನೀವು ಯೋಚನೆ ಮಾಡಿಲ್ಲ. ಹಣ ಬರಬೇಕು, ಕೊರತೆ ತುಂಬಿಸಬೇಕೆಂಬುದನ್ನು ಮಾತ್ರ ಗಮನದಲ್ಲಿ ಇಟ್ಟುಕೊಂಡು ಇದನ್ನೆಲ್ಲಾ ಹೆಚ್ಚು ಮಾಡಿದ್ದೀರಿ, ಜನ ಸಾಮಾನ್ಯರು ಉಪಯೋಗಿಸುವ ವಸ್ತುಗಳಲ್ಲಿ ಯಾವುವು ಎಂಬುದನ್ನು ಗಮನದಲ್ಲಿ ಇಟ್ಟು ಇದನ್ನು ಮಾಡಿಲ್ಲ ಎಂಬುದನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಸೇಧ್ಯವ್ಯಾಟಿಸ್ ಬಗ್ಗೆ ಇದ್ದ ೪ ಪರ್ಸೆಂಟ್‌ನ್ನು ಒಮಿಟ್ ಮಾಡಬೇಕೆಂದು ಹೇಳಿದ್ದೀರಿ. ಈ ಬಗ್ಗೆ ಮಾನ್ಯ ಪೊಯ್ಲಿಯವರೂ ಕೂಡಾ ಹೇಳಿದ್ದಾರೆ. ಇದು ಒಂದು ಕನ್‌ಸೇಷನ್ ಕೊಟ್ಟಿರುವುದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ ಹಲವಾರು ವಸ್ತುಗಳು ಏನು ಜನ ಸಾಮಾನ್ಯರು ಉಪಯೋಗಿಸುವಂತಹವು ಇವೆ ಅವುಗಳ ಮೇಲೆ ತೆರಿಗೆಯ ಹೊರೆ ಹೆಚ್ಚು ಹೊರಿಸಿದ್ದೀರಿ. ತಾವು ಆಯವ್ಯಯದಲ್ಲಿ ಹೇಳಿರುವುದಕ್ಕೂ ಹಾಗೂ ಪಡ್ಯೂಲ್‌ನಲ್ಲಿ ತೋರಿಸಿರುವುದಕ್ಕೂ ಸ್ವಲ್ಪ ಮಟ್ಟಿನ ವ್ಯತ್ಯಾಸ ಇದೆ. ಕೆಲವು ರಿಯಾಯಿತಿಗಳ ಬಗ್ಗೆ ನಾನು ಕಿದ್ದುಪಡಿ ತಂದಿದ್ದೇನೆ. ನಾನು ಕ್ಲಾಸ್ ೦೫(೬), ೦೫(೯), ೦೫(೧೦), ೦೫(೧೫), ೦೫(೨೬) ಗಳಿಗೆ ತಿದ್ದುಪಡಿಯನ್ನು ಕಳುಹಿಸಿಕೊಟ್ಟಿದ್ದೇನೆ

ನೆಗೆಟೀವ್ ಅಮೆಂಡ್‌ಮೆಂಟ್ಸ್ ಮಾಡಬೇಡಿ, ಪಾಸಿಟಿವ್ ಅಮೆಂಡ್‌ಮೆಂಟ್ಸ್ ಮಾಡಿ ಬರುವುದನ್ನು ತೆಗೆದುಕೊಳ್ಳಿ. ಇರುವ ರೇಟ್ಸ್ ಹಾಗೆಯೇ ಇರಲಿ. ಹಾಕಿರುವುದನ್ನು ಕ್ಯಾನ್ಸಲ್ ಮಾಡಿ ಜಾಸ್ತಿ ಮಾಡಬೇಡಿ. ಜಾಸ್ತಿ ಮಾಡದೇ ಇರುವುದಕ್ಕೆ ಜಾಸ್ತಿ ಮಾಡಿ. ಹೊಸೈರಿ ಮೇಲೆ ಹಾಕಿರುವ ತೆರಿಗೆಯನ್ನು ಕಡಿಮೆ ಮಾಡಿ. ಚಿಲ್ಡ್ರನ್ ಬೈಸಿಕಲ್ ಮತ್ತು ಇತರೆ ಬೈಸಿಕಲ್‌ಗಳ ಮೇಲೆ ಟ್ಯಾಕ್ಸ್ ಹೆಚ್ಚು ಹಾಕಿರತಕ್ಕದ್ದು ತುಂಬಾ ಅನ್ಯಾಯ. ನಿಮ್ಮ ಘೋಷಣೆಗೂ ನಿಮ್ಮ ಸರ್ಕಾರದ ನೀತಿಗೂ ಇದರಿಂದ ವಿರೋಧವಾಗುತ್ತದೆ. ಆದ್ದರಿಂದ ನಾನು ಹೇಳಿದ ರೀತಿಯಲ್ಲಿ ಅಮೆಂಡ್‌ಮೆಂಟ್ ಮಾಡುತ್ತಾರೆಂದು ನಂಬಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಂಗಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷ್ಣನ್ ಹೇಳಿರುವುದನ್ನು ನಾನು ಅನುಮೋದಿಸುತ್ತೇನೆ. ರೈತರ ಬಗ್ಗೆ ಸರ್ಕಾರ ಕನ್ಸೇಷನ್ ಕೊಡಬೇಕು. ಅದರ ಬಗ್ಗೆ ಯೋಚನೆ ಮಾಡಬೇಕು. Parts and accessories of power-tillers ಅದರ

ಮೇಲೆ ಹಾಕಿರುವುದು ಜಾಸ್ತಿಯಾಯಿತು. Chemical fertilisers other than those falling under sub-items (ii) ಮೇಲೆ ೨ ಪರ್ಸೆಂಟ್ ಏನು ಟ್ಯಾಕ್ಸ್ ಹಾಕಿದ್ದಾರೆ ಅದು ಸರಿಯಲ್ಲ. ನಾನು ಮಾನ್ಯ ಮಂತ್ರಿಗಳವರಲ್ಲಿ ಕೇಳಿಕೊಳ್ಳುವುದೇನೆಂದರೆ ವ್ಯವಸಾಯ ರಂಗದಲ್ಲಿ ಈಗಾಗಲೇ ತಮಗೆ ಗೊತ್ತಿರುವಹಾಗೆ ಅದು ಲಾಭದಾಯಕವಾದ ವೃತ್ತಿಯಾಗಿಲ್ಲ. ಆದ್ದರಿಂದ ರೈತರ ಮೇಲೆ ಟ್ಯಾಕ್ಸ್ ಹಾಕಿರತಕ್ಕದ್ದನ್ನು ಬಿಟ್ಟುಬಿಡಬೇಕು. ಫರ್ಟಿಲೈಸರ್‌ಗಳ ಮೇಲೆ ಟ್ಯಾಕ್ಸ್ ಹಾಕಿರುವುದು ತಪ್ಪು. ಕರ್ನಾಟಕ ರಾಜ್ಯದಲ್ಲಿ ತರಕಾರಿ ಬೆಳೆಯುವವರು ಡಿಪ್ಪಸ್ ರೇಟ್‌ನಲ್ಲಿ ಮಾರಾಟ ಮಾಡುತ್ತಿದ್ದಾರೆ. ಪ್ಲೋಟಾಟಿನ ಒಂದು ಕೆ.ಜಿ ೭೫ ಪೈಸೆಗೆ, ಟೋಮಾಟೊ ೫೦ ಪೈಸೆಯಿಂದ ೩೦ ಪೈಸೆಗೆ ಹೋಗುತ್ತಾ ಇದೆ. ತರಕಾರಿ ಬೆಳೆಯುವವರಿಗೆ ಫರ್ಟಿಲೈಸರ್ ಹೆಚ್ಚಾಗಿ ಬೇಕಾಗುತ್ತದೆ. ಅವರು ಹೆಚ್ಚಾಗಿ ಉಪಯೋಗ ಮಾಡುವುದರಿಂದ ಅದು ಈಗಲೇ ಲಾಭದಾಯಕವಾದ ವೃತ್ತಿ ಅಲ್ಲ ಎನ್ನುವುದು ಎಲ್ಲರಿಗೂ ಗೊತ್ತಿದ್ದರೂ ಕೂಡ ಟ್ಯಾಕ್ಸನ್ನು ಹಾಕಿದ್ದಾರೆ, ಅದನ್ನು ತೆಗೆಯಬೇಕು. Chemical fertilisers other than these falling under sub-item (ii) ಕಾಫಿ ಟೀ ಅವುಗಳ ಮೇಲೆ ಟ್ಯಾಕ್ಸ್ ಹಾಕಿದ್ದಾರೆ. ಸಾಧಾರಣವಾಗಿ ಕಾಫಿ ಟೀ ಅನ್ನು ಎಲ್ಲರೂ ಉಪಯೋಗ ಮಾಡುತ್ತಾರೆ. ಅದು ಎಲ್ಲರಿಗೂ ಎಫೆಕ್ಟ್ ಆಗುತ್ತದೆ ಅದನ್ನು ಬಿಡಬೇಕು. ಮಾನ್ಯ ಮಂಖ್ಯಿ ಮಂತ್ರಿಗಳು ಒಳ್ಳೆಯ ಹೆಸರನ್ನು ಸಂಪಾದನೆ ಮಾಡಬೇಕೆಂದು ನನ್ನ ಪ್ರಾರ್ಥನೆ. ಪಲ್ಸ್ ಮತ್ತು ಚಿನ್ನಿಪಲ್ಸ್ ಐಟಂಗಳು ಏನಿವೆ ಅವುಗಳ ಮೇಲೆ ಟ್ಯಾಕ್ಸ್ ಹಾಕಿದ್ದಾರೆ. ಈಗಲೇ ಗ್ರಾಹಕರ ಮೇಲೆ ಸಾಕಷ್ಟು ತೆರಿಗೆಗಳನ್ನು ಹೊರಿಸಲಾಗಿದೆ. ಇನ್ನು ಜಾಸ್ತಿ ಮಾಡಿದರೆ ಕಷ್ಟವಾಗುತ್ತದೆ. ಬೆಂಗಳೂರು ನಗರ ಬಹಳ ದುಬಾರಿ ನಗರವಾಗಿದೆ. ಸಾಮಾನ್ಯ ಜನರ ಮೇಲೆ ಏನೇನು ಹೊರೆ ಬೀಳುತ್ತಪೆ ಅಂತಹವುಗಳ ಮೇಲಿನ ತೆರಿಗೆಯನ್ನು ತೆಗೆಯಬೇಕೆಂದು ಹೇಳುತ್ತೇನೆ. ಮತ್ತೊಂದು ವಿಷಯದಲ್ಲಿ ಮಾನ್ಯ ಮಂಖ್ಯಿ ಮಂತ್ರಿಗಳನ್ನು ಕೇಳಿಕೊಳ್ಳುವುದೇನೆಂದರೆ ಪ್ರೈಸ್ ಕಂಟ್ರೋಲ್ ಇಲ್ಲ. ಯಾವುದೇ ಒಂದು ವಸ್ತುವನ್ನು ತೆಗೆದುಕೊಂಡರೂ ಅದು ನಮಗೆ ಗೊತ್ತಾಗುತ್ತದೆ. ಒಂದು ಅಂಗಡಿಯಲ್ಲಿ ಬಟ್ಟೆ ತೆಗೆದುಕೊಳ್ಳುವಾಗ ಲೋಕಲ್ ಟ್ಯಾಕ್ಸ್, ಮತ್ತು ಎಕ್ಸ್‌ಟ್ರಾ ಟ್ಯಾಕ್ಸ್ ಎಂದು ಹಾಕುತ್ತಾರೆ. ನಾವು ಅಂಗಡಿಗಳಿಗೆ ಹೋದರೆ ಯಾವ ಯಾವ ಟ್ಯಾಕ್ಸ್ ಹಾಕುತ್ತಾರೆಂದು ನಮಗೆ ಗೊತ್ತಾಗುವುದಿಲ್ಲ. ಇನ್ನು ಸಾಮಾನ್ಯ ಮನುಷ್ಯನಿಗೆ ಹೇಗೆ ಗೊತ್ತಾಗುತ್ತದೆ ? ನಾವು ಕೇಳಿದರೆ ಅವರು ಏನೋ ಒಂದು ಹೇಳುತ್ತಾರೆ. ಅವರು ಹೇಳಿದಷ್ಟು ಕೊಟ್ಟು ಕೊಂಡುಕೊಳ್ಳಬೇಕಾಗಿದೆ. ಅದು ಎಲ್ಲಿಯವರೆಗೆ ಹೋಗಿದೆ ಎಂದರೆ ಒಂದು ಸಿಗರೇಟ್ ಪ್ಯಾಕ್ ೪.೫೦ ಪೈಸೆ ಇದ್ದರೆ ಅವರು ೫.೧೦ ತೆಗೆದುಕೊಳ್ಳುತ್ತಾರೆ. ಏತಕ್ಕೆ ಹಾಗೆ ತೆಗೆದುಕೊಳ್ಳುತ್ತಾರೋ ನಮಗೆ ಅರ್ಥವಾಗುವುದಿಲ್ಲ. ಲೋಕಲ್ ಟ್ಯಾಕ್ಸ್ ಎಕ್ಸ್‌ಟ್ರಾ ಎಂದು ಹೇಳುತ್ತಾರೆ. ಕಾನೂನು ಮಾಡಿದ ಮೇಲೆ ಗ್ರಾಹಕರ ಹಿತವನ್ನು ರಕ್ಷಣೆ ಮಾಡಬೇಕು. ಆ ಒಂದು ನೀತಿಗೆ ಸರ್ಕಾರ ಬದ್ಧವಾಗಿದೆ. ಗ್ರಾಹಕರಿಗೆ ಅದರ ಬೆಲೆಯನ್ನು ಸ್ಪಷ್ಟವಾಗಿ ತಿಳಿಸಿದರೆ, ನಮಗೆ ಕನ್‌ಫ್ಯೂಷನ್ ಇರುವುದಿಲ್ಲ. ಕ್ರೀಮ್ ೫ ರೂಪಾಯಿ ಇದ್ದರೆ ಅವರು ೭ ರೂಪಾಯಿ ಎಂದು ಹೇಳುತ್ತಾರೆ. ಲೋಕಲ್ ಟ್ಯಾಕ್ಸ್ ಹೆಚ್ಚಾಗಿದೆಯೆಂದು ಹೇಳುತ್ತಾರೆ. ಸಾಮಾನ್ಯ ಜನರಿಗೆ ತಿಳಿಯುವಂತೆ ಅದರ ಬೆಲೆ ಎಷ್ಟು ಇದೆ ಅದನ್ನು ಪ್ರಿಂಟ್ ಮಾಡಿಸಿ ಗ್ರಾಹಕರಿಗೆ ತಿಳಿಯುವಂತೆ ಮಾಡಬೇಕು. ಅದರ ಬೆಲೆ ಮತ್ತು ಟ್ಯಾಕ್ಸ್ ಎಷ್ಟೆಂಬುದನ್ನು ಅದರ ಜೊತೆಯಲ್ಲಿ ಮಂದ್ರಿಸಿದರೆ ಗ್ರಾಹಕರಿಗೆ ಅನುಕೂಲವಾಗುತ್ತದೆ. ಇಲ್ಲದೇ ಹೋದರೆ ವ್ಯಾಪಾರಸ್ಥರು ಗ್ರಾಹಕರಿಗೆ ವಿಪರೀತವಾಗಿ ಮೋಸ ಮಾಡುತ್ತಾರೆ.

ಐದು ಸಾವಿರ ರೂಪಾಯಿ ಬಂಡವಾಳ ಹಾಕಿ ಒಂದು ಅಂಗಡಿಯನ್ನು ಇಟ್ಟುಕೊಂಡಿರುವವನು ಎರಡು ವರ್ಷದಲ್ಲಿ ೨೫ ಸಾವಿರ ರೂಪಾಯಿಗಳ ಬಂಡವಾಳವನ್ನು ಮಾಡಿಕೊಂಡಿರುತ್ತಾನೆ. ಒಳ್ಳೆಯ ಜೀವನ ನಡೆಸುತ್ತಾನೆ. ಎರಡು ಸಾವಿರ ರೂಪಾಯಿ ಸಂಬಳ ತೆಗೆದುಕೊಂಡರೂ ಕೂಡ ಬೆಲೆ ಇರುವುದಿಲ್ಲ. ಮಂಖ್ಯಿ ಮಂತ್ರಿಗಳು ಸ್ಪಷ್ಟವಾಗಿ ಇನ್ನು ಮುಂದಾದರೂ ಇಂತಹ ಮೋಸಗಳಿಗೆ ಎಡೆಕೊಡದೆ ಎಷ್ಟೆಷ್ಟು Local taxes ಎಂದು ಕಂಪನಿಯವರಿಗೆ ಹೇಳಿಬಿಟ್ಟಿರೆ, ಈ ಕಂಪನಿಗಳು ಕರ್ನಾಟಕಕ್ಕೆ ಬರುವಾಗಲೇ ಅದನ್ನು ಪ್ರಿಂಟ್ ಮಾಡಿದರೆ ಒಳ್ಳೆಯದು. ಜೊತೆಗೆ ಇದರಿಂದ ಒಳಕೆದಾರರನ್ನೂ ಸಹ ರಕ್ಷಣೆ ಮಾಡಿದಹಾಗೆ ಆಗುತ್ತದೆ. ಇದರ ಬಗ್ಗೆ ಯೋಚನೆ ಮಾಡಬೇಕು. ಆಮೇಲೆ ಗ್ರೌಂಡ್‌ನೆಟ್ ಆಯಿಲ್, ಕೊಕೋನಟ್ ಆಯಿಲ್‌ಗೆ ಇನ್ನುಷ್ಟು ರಿಯಾಯಿತಿ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಅದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ರೈತರು ಬೆಳೆಯುವ

ವಸ್ತುಗಳು ಏನಿವೆ, ಅವುಗಳ ಬೆಲೆ ಕುಸಿದುಹೋಗಿದೆ. ರೈತರು ಬದುಕುವುದು ಹೇಗೆ ಎನ್ನುವ ಪರಿಸ್ಥಿತಿ ಇದೆ. ವ್ಯಾಪಾರಸ್ಥರು ನಮ್ಮ ಮೇಲೆಯೇ ತೆರಿಗೆಯನ್ನು ಹಾಕುತ್ತಾರೆ. ಹತ್ತು ರೂಪಾಯಿ ಟ್ಯಾಕ್ಸ್ ಹಾಕಿದರೆ ರೈತರಿಂದ ೨೦ ರೂಪಾಯಿ, ಬಳಕೆದಾರರಿಂದ ೨೦ ರೂಪಾಯಿ ವಸೂಲು ಮಾಡುತ್ತಾರೆ. ರೈತರ ಬಗ್ಗೆ ಕಾಳಜಿ ವಹಿಸಬೇಕೆಂದು ಹೇಳುತ್ತೇನೆ. ಫರ್ಟಿಲೈಸರ್ಸ್ ಏನಿದೆ, ಐಟಮ್‌ಗಳು ೪೮(ಎ) ಪೂರ್ತಿಯಾಗಿ ತೆರಿಗೆ ಹಾಕುವುದನ್ನು ದಯವಿಟ್ಟು ಬಿಡಬೇಕು ಎಂತು ರೈತರ ಬಗ್ಗೆ ಕಾಳಜಿ ವಹಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಕೆಲವು ಐಟಮ್‌ಗಳು ಇವೆ. ಕಾಫಿ, ಟೀ ಗೆ ಇಪ್ಪರು ತೆರಿಗೆ ಹಾಕಿರುವುದು ಅನ್ಯಾಯ. ಇದನ್ನು ಪುನರ್ ಪರಿಶೀಲಿಸಿ ಕಾಫಿ, ಟೀ, ಗ್ರೌಂಡ್‌ನಟ್ ಆಯಿಲ್, ವನಸ್ಪತಿ, ಸಿಮೆಂಟ್ ಬಿಟ್ಟು ಬೇರೆ ಐಟಮ್‌ಗಳಿಂ ಬೇಕಾದಷ್ಟು ಬರುತ್ತವೆ. ಇವನ್ನು ಬಿಟ್ಟರೆ ೫೦ ಕೋಟಿ ನಷ್ಟವೇನೂ ಆಗುವುದಿಲ್ಲ. ಆದರೆ ಸಾಮಾನ್ಯ ಮನುಷ್ಯನಿಗೆ ಎಫೆಕ್ಟ್ ಆಗುವಂತೆ ಏನೇನು ತೆರಿಗೆಗಳನ್ನು ಹಾಕಿದ್ದಾರೆ, ಅವುಗಳನ್ನು ವಾಪಸ್ಸು ಪಡೆಯಬೇಕೆಂದು ಕೇಳಿಕೊಳ್ಳುತ್ತೇನೆ.

SRI BLASIOUS M. D'SOUZA (Mangalore).—Sir, I would like to point out few things about turnover tax. This has been reduced from Rs. 15 lakhs to Rs. 5 lakhs, with the reasons stating that dealers divide their business and escape from tax paying. I am reminded that in 1973 when they wanted to abolish octroi they thought of having turnover tax of ½%. Then the total turnover was Rs. 2000 crores and the total octroi collected in the State was Rs. 8½ crores, But, today we found that inspite of the fact that there are entry tax surcharge, turnover tax, every year the Government is increasing taxes and this tax does not go to Corporations or municipalities. Now as they have reduced the applicability turnover tax from Rs. 15 lakhs to 5 lakhs. I would request the Hon. Chief Minister to reduce the turnover tax from 1% to ½% instead of raising it from 1% to 1½%. He has made it applicable to whole business community. Last year they had collected about 30-40 crores of rupees and this year as per the present taxation this will be not less than 60 crores of rupees. I request the Hon'ble Chief Minister to think of reducing the tax and see that the businessmen pay tax correctly. Secondly, as some Hon. Members spoke not to increase tax on coffee, tea, bycycles but to keep them down. Today the budget has shown the increase of Rs. 104 crores in Sales Tax. As you are aware the sales tax was introduced first in Madras presidency by Sri Rajagopalachary. At that time it was ½% because he had introduced it on account of prohibition. Today our state is collecting Rs. 260 crores as excise duty, Rs. 694 crores as sales tax. Rs. 40 crores as entry tax and Rs. 40 crores as turnover tax. All these have been increased year after year continuously. The reason attributed is to the deficit, financing. If we are able to tighten our belts we will be able to tideover this deficit budget. The taxtation should be an incentive to the business community. Secondly, in the budget it has been

stated that one who registers he has to affix his photo. Most of the firms and partner ship concerns have to register and they have to give their photos. Why do you demand the affixation of photographs at the time of registration? Are they criminals? Business community should not be treated like that on the other has they should be praised. In a country like America, the Government always praises the business community. Now here, the Chief Minister treats the business community as criminals. He wants their photos to be affixed. I request the Chief Mininster to cancel this system of affixing photo graphs, and as Mr. Moily has pointed out, you take their specimen signatures. I also request that there should be revision of taxation on essential commodities and reduce the turnover tax from 1% to ½% instead of increasing it. You have given incentive so that they will be able to give turnovers correctly and pay taxes also correctly.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಒಂದು ರಿಯಾಯಿತಿ ಹೇಳತಕ್ಕಂಥದ್ದನ್ನು ನಾನು ಇಲ್ಲಿ ಇಟ್ಟುಬಿಟ್ಟಿದ್ದೇನೆ, ಅದನ್ನು ಇಲ್ಲಿ ಹೇಳಬೇಕು. ಅದು ಬೆಲ್ಲಕ್ಕೆ ಸಂಬಂಧಪಟ್ಟಿದ್ದು.

"Turn over tax payable by commission agents on sales turnover of jaggery effected on behalf of agriculturist principals would be exempted".

ಇದೂ ಕೂಡ ಹೇಳುವುದಕ್ಕೆ ತಪ್ಪಿ ಹೋಯಿತು. ಮಾನ್ಯ ಮೊಯಿಲಿಯವರು ಇಲ್ಲಿ ಇಲ್ಲ. ನಾವು ಏನು ರಿಯಾಯಿತಿ ತೋರಿಸಿದ್ದೇವೆ, ಆದರಿಂದ ತೆರಿಗೆ, ಅಷ್ಟು ಆದಾಯದಲ್ಲಿ ಕಡಿಮೆಯಾಗುತ್ತದೆ. ಒಂದು ಕೋಟಿ, ಇಪ್ಪತ್ತು ಲಕ್ಷ ಕಡಿಮೆಯಾಗುತ್ತದೆ ಎಲ್. ಪಿ. ಜಿ. ೧೦ ಲಕ್ಷ, ಲೂಬ್ರಿಕೆಂಟ್ ೧೫ ಲಕ್ಷ, ಮೆಡಿಸಿನ್ ೫೦ ಲಕ್ಷ, ಜಾಗರಿ ೨೫ ಲಕ್ಷ, ಬೇರೆ ಬೇರೆ ಕನ್‌ಸೇಷನ್ ೧೦ ಲಕ್ಷ, ಸೇಲ್ಸ್‌ಟ್ಯಾಕ್ಸ್ ಎಕ್ಸೆಂಪ್ಷನ್ ವಿಲೇಜ್ ಇಂಡಸ್ಟ್ರೀಸ್‌ನಲ್ಲಿ ಪ್ಯಾಡಿ ೧೦ ಲಕ್ಷ, ಒಟ್ಟು ೧೨೦ ಲಕ್ಷ ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬಜೆಟ್ ಮೇಲೆ ಚರ್ಚೆ ಮಾಡುವ ಸಮಯದಲ್ಲಿ ಏನೇನು ಪಾಯಿಂಟ್ ಹೇಳಿದ್ದರೋ ಹೆಚ್ಚು ಕಡಿಮೆ ಅದೇ ಪಾಯಿಂಟ್‌ನ್ನೇ ಪುನರುಚ್ಚಾರಣೆ ಮಾಡಿದ್ದಾರೆ. ಅದನ್ನು ಗಮನದಲ್ಲಿಟ್ಟು ಕೊಂಡೇ ಕೊನೆಯ ನಿರ್ಧಾರಕ್ಕೆ ಬಂದಿದ್ದೇವೆ. ಮಾನ್ಯ ಸದಸ್ಯರು ಮಾಡಿದಂಥ ಸೂಚನೆಗಳಿಗೆ ಧನ್ಯವಾದಗಳು. ಈ ಮಾರಾಟ ತೆರಿಗೆಯನ್ನು ಸಭೆಯು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ

ಅಧ್ಯಕ್ಷರು.—ಈಗ ಪ್ರಸ್ತಾಪ ಏನೆಂದರೆ, ...ರಿಯೇನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ ೨ ರಿಂದ ೧೪ರ ವರೆಗೆ:—

ಅಧ್ಯಕ್ಷರು.—''ಖಂಡ ೨ರಿಂದ ೧೪ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿ ರುತ್ತವೆ. ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ ೨ ರಿಂದ ೧೪ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಖಂಡ ೧೫:—

ಅಧ್ಯಕ್ಷರು.—ಮಾನ್ಯ ಎಂ. ಎಸ್. ಕೃಷ್ಣನ್‌ರವರು ತಿದ್ದುಪಡಿ ಸೂಚನೆಯನ್ನು ಕೊಟ್ಟಿದ್ದಾರೆ, ತಿದ್ದುಪಡಿಯನ್ನು ಮಂಡಿಸಬೇಕು.

SRI M. S. KRISHNAN.—I beg to move the following amendment to Clause 15:

"That in sub-clause (1) of Clause 15, for the words "Two percent", the words "One percent" shall be substituted;

That in sub-clause (2) of Clause 15, the words "Two percent" shall be deleted."

The amendment was proposed

ಅಧ್ಯಕ್ಷರು.—ಮಾನ್ಯ ಕೃಷ್ಣನ್‌ರವರೇ ಮಾತನಾಡಿ...

ಶ್ರೀ ಎ. ಲಕ್ಷ್ಮೀಸಾಗರ್.—ಈಗಾಗಲೇ ಹೇಳಿದ್ದಾರೆ, ಎರಡನೇ ಸಲ ಇದು ಪುನರುಚ್ಚಾರ ಆಗಿದೆ. ಸರಕಾರದ ನಿಲುವಿನಲ್ಲಿ ಏನೂ ಬದಲಾವಣೆ ಇಲ್ಲ.

SRI M S. KRISHNAN.—We have our say and they have their way. I know that. We must have our say.

ಅಧ್ಯಕ್ಷರು.—ನಿಮ್ಮ ಅಮೆಂಡ್‌ಮೆಂಟ್ ಪ್ರೆಸ್ ಮಾಡುತ್ತೀರೋ ಅಥವಾ ವಿಥ್‌ಡ್ರಾ ಮಾಡುತ್ತೀರೋ ?

SRI M. S. KRISHNAN.—We do press.

ಅಧ್ಯಕ್ಷರು.—ಈ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ, ತಿದ್ದುಪಡಿ ಪ್ರಸಾವ ಏನೆಂದರೆ—

"That in Sub-Clause (1) of Clause 15, for the words Two perent", the words "One percent" shall be substituted;

That in sub-clause (2) of Clause 15, the words "Two percent" shall be deleted."

ತಿದ್ದುಪಡಿ ಪ್ರಸ್ತಾವ ತಿರಸ್ಕೃತವಾಯಿತು

ಖಂಡ ೧೫

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ "ಖಂಡ ೧೫ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೧೫ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧೬–೨೦

ಅಧ್ಯಕ್ಷರು.—ಖಂಡ ೧೬–೨೦ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ ೧೬ ರಿಂದ ೨೦ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟವು)

ಖಂಡ ೧ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗಳಿಸುವ ಸೂತ್ರ ಸಂಹಿತೆಗಳು ವಿಧೇಯಕದ ಅಂಗವಾಗಿರುತ್ತವೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ ದೀರ್ಘ ಶಿರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರ ಮಂತ್ರಿಗಳು,(ಮುಖ್ಯಮಂತ್ರಿಗಳ ಪರವಾಗಿ).—೧೯೮೭ನೇ ಇಸವಿಯ ಕರ್ನಾಟಕ ಮ್ಯಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿದಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''೧೯೮೭ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆಯ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿದಂತೆ ಅಂಗೀಕರಿಸುವುದು.''

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು.)

೧೯೮೭ನೇ ಇಸವಿಯ ಕರ್ನಾಟಕ ಕೃಷಿ ಆದಾಯ ತೆರಿಗೆ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ನಾಗರೀಕ ಸರಬರಾಜು ಮಂತ್ರಿಗಳು) (ಮುಖ್ಯಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೇ ೧೯೮೭ನೇ ಇಸವಿಯ, ಕರ್ನಾಟಕ ಕೃಷಿ ಆದಾಯ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸ ಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿ ವಿಧೇಯಕದಲ್ಲಿ ಸರಕಾರಕ್ಕೆ ಹೆಚ್ಚು ಆದಾಯ ಏನೂ ಇಲ್ಲ. ಕೆಲವು ಮಾರ್ಪಾಡುಗಳನ್ನು ಮಾಡುವುದರ ಮಂಜಾಂತರ ಕೆಲವು ರಿಯಾಯಿತಿ ಗಳನ್ನು ತೋರಿಸಿರತಕ್ಕಂಥಾದ್ದು ಇದರಲ್ಲಿ ಇದೆ. ಈ ರಿಯಾಯಿತಿಗಳ ಬಗ್ಗೆ ಪ್ರಸ್ತಾಪನೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜೆಟ್ ಭಾಷಣದ ಔರೆ ಪ್ಯಾರಾಗ್ರಾಫ್‌ನಲ್ಲಿ ಹೇಳಿದ್ದಾರೆ. ಈ ಕಾರಣದಿಂದ ಇದರ ಬಗ್ಗೆ ಹೆಚ್ಚು ವಿಶ್ಲೇಷಣೆ ಮಾಡತಕ್ಕದ್ದು ಅನಗತ್ಯ ಎಂದು ನಾನು ಭಾವಿಸಿದ್ದೇನೆ. ಈ ತೆರಿಗೆಯನ್ನು ಕೊಡತಕ್ಕಂಥವರಿಗೆ ರಿಯಾಯಿತಿಗಳನ್ನು ಕೊಟ್ಟಿದೆ. ಇಲ್ಲಿ ಕರಭಾರ ಏನೂ ಇಲ್ಲ, ಈ ತಿದ್ದುಪಡಿ ಮಸೂದೆಗೆ ಬೆಂಬಲ ಕೊಡಬೇಕೆಂದು ಹೇಳಿ ಸನ್ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿ ಕೊಳ್ಳುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೮೭ನೇ ಇಸವಿಯ ಕರ್ನಾಟಕ ಕೃಷಿ ಆದಾಯ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು